MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ


ಕನ್ನಡ ದಿನಪತ್ರಿಕೆ “ಇದು ರಾಷ್ಟ್ರದ ಧ್ವನಿ”

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 ಸಂಚಿಕೆ: 70 ಗುರುವಾರ : 01-01-2026 ರಾಯಚೂರು RNI NO: KARKAN/2022/90446 ಪುಟ: 4 ಬೆಲೆ: ರೂ: 2-00

VOLUME: 05 ISSUE: 70 THURSDAY : 01-01-2026 RAICHUR EMAIL: YUVAMARGA@GMAIL.COM PAGE: 4 PRICE: Rs: 2-00


## ಹೊಸ ವರ್ಷದಲ್ಲಿ ಜಿಡಿಪಿ ವೃದ್ಧಿ ನಿರೀಕ್ಷೆ



**ನವದೆಹಲಿ,ಡಿ.31**–ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷ 2025-26 ರಲ್ಲಿ ವೇಗವಾಗಿ ಬೆಳೆಯುವ ನಿರೀಕ್ಷೆಯಿದೆ. ಐಸಿಆರ್‌ಎ ಲಿಮಿಟೆಡ್ ಮಂಗಳವಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಈ ವರ್ಷ ದೇಶದ ಜಿಡಿಪಿ ಬೆಳವಣಿಗೆ ಶೇಕಡಾ 7.4 ರಷ್ಟಾಗುವ ನಿರೀಕ್ಷೆಯಿದೆ, ಇದು ಕಳೆದ ವರ್ಷದ ಅಂದಾಜಿನ ಶೇಕಡಾ 6.5 ಕ್ಕಿಂತ ಹೆಚ್ಚಾಗಿದೆ. ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ ಆರ್ಥಿಕ ಬೆಳವಣಿಗೆ ಬಲವಾಗಿ ಉಳಿಯಬಹುದು ಮತ್ತು ಈ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ಶೇಕಡಾ 8 ರಷ್ಟನ್ನು ತಲುಪಬಹುದು ಎಂದು ವರದಿ ಹೇಳುತ್ತದೆ.

ಆದರೆ, ವರ್ಷದ ದ್ವಿತೀಯಾರ್ಧದಲ್ಲಿ ಬೆಳವಣಿಗೆ ಸ್ವಲ್ಪ ನಿಧಾನವಾಗಬಹುದು ಮತ್ತು ಶೇಕಡಾ 7 ಕ್ಕಿಂತ ಕಡಿಮೆಯಾಗಬಹುದು. ವರದಿಯು ಬಾಹ್ಯ ಸವಾಲುಗಳನ್ನು, ವಿಶೇಷವಾಗಿ ದುರ್ಬಲ ರಫ್ತುಗಳನ್ನು ಎತ್ತಿ ತೋರಿಸುತ್ತದೆ, ಇದು ಯುಎಸ್ ಜೊತೆ ವ್ಯಾಪಾರ ಒಪ್ಪಂದವನ್ನು ತಲುಪದ ಹೊರತು ಆರ್ಥಿಕತೆಯು ಮೇಲೆ ಮತ್ತಷ್ಟು ಒತ್ತಡ ಹೇರಬಹುದು. ಐಸಿಆರ್‌ಎ ಪ್ರಕಾರ, 2026 ರ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆ ಸಕಾರಾತ್ಮಕವಾಗಿಯೇ ಉಳಿದಿದೆ. ಹಬ್ಬದ ಋತುವಿನಲ್ಲಿ ಹೆಚ್ಚಿದ ಬೇಡಿಕೆ ಮತ್ತು ಜಿಎಸ್ಟಿ ದರಗಳಲ್ಲಿನ ಕಡಿತವು ಗ್ರಾಹಕರ ಖರೀದಿಗಳನ್ನು ಉತ್ತೇಜಿಸಿದೆ.

ಗಣಿಗಾರಿಕೆ, ನಿರ್ಮಾಣ ಮತ್ತು ವಿದ್ಯುತ್ ಕ್ಷೇತ್ರಗಳಲ್ಲಿ ಬೇಡಿಕೆ ಮುಂಬರುವ ತಿಂಗಳುಗಳಲ್ಲಿ ಹೆಚ್ಚಾಗುವ ನಿರೀಕ್ಷೆಯಿದೆ. ಆರಂಭದಲ್ಲಿ ಮಳೆಯಿಂದಾಗಿ ಸ್ವಲ್ಪ ಅಡಚಣೆ ಉಂಟಾದರೂ, ಈಗ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಿದೆ. ರಫ್ತು ಕುಸಿತವು ವರ್ಷದ ದ್ವಿತೀಯಾರ್ಧದಲ್ಲಿ ಹೆಚ್ಚಾಗಬಹುದು, ಇದು ಆರ್ಥಿಕ ಬೆಳವಣಿಗೆಯ ಮೇಲೆ ಮತ್ತಷ್ಟು ಪರಿಣಾಮ ಬೀರುತ್ತದೆ.

ಕಡಿಮೆ ಹಣದುಬ್ಬರ ಮತ್ತು ಉತ್ತಮ ಮಾನ್ಸೂನ್ ಮಳೆಯು ಕೃಷಿ ವಲಯಕ್ಕೆ ಪ್ರಯೋಜನವನ್ನು ನೀಡಿತು. ಆದಾಗ್ಯೂ, ಬಾಹ್ಯ(**2ನೇ ಪುಟಕ್ಕೆ**>>>)

## ವಿಶ್ವ ವಿಕಲಚೇತನರ ದಿನಾಚರಣೆ: ವಿಕಲಚೇತನರು ಸಮಾಜದ ಮುಖ್ಯವಾಹಿನಿಗೆ ಬರಬೇಕು:ಎಡಿಸಿ ಶಿವಾನಂದ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.31**– ವಿಕಲಚೇತನರು ಕೀಳರಿಮೆ ಬಿಟ್ಟು ತಮ್ಮ ಸವಾಲುಗಳನ್ನು ಸ್ವೀಕರಿಸಿ ಸಾಮರ್ಥ್ಯವನ್ನು ಅರಿತು ಸಮಾಜದ ಮುಖ್ಯವಾಹಿನಿಗೆ ಬರಬೇಕು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಲಹೆ ನೀಡಿದರು.

ಡಿಸೆಂಬರ್ 31ರ ಬುಧವಾರ ದಂದು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿಕಲಚೇತನರ ಕಲ್ಯಾಣ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸಂಘ, ಸಂಸ್ಥೆ




ಒಕ್ಕೂಟಗಳು ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ-2025ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ದೇವರು ಎಲ್ಲರಿಗೂ ಆಳುವ ಶಕ್ತಿ ನೀಡಿದ್ದಾನೆ. ಪ್ರತಿಯೊಬ್ಬರಲ್ಲಿಯೂ ಅಗಾಧ ಶಕ್ತಿ, ಸಾಮರ್ಥ್ಯ, ಜ್ಞಾನ, ಕೌಶಲ್ಯ ಅಡಗಿರುತ್ತದೆ. ವಿಕಲಚೇತನರು ಸಕರಾತ್ಮಕವಾಗಿ ಆಲೋಚನೆ ಮಾಡಬೇಕು. ಸವಾಲುಗಳನ್ನು ಸ್ವೀಕರಿಸಿ ಮುನ್ನಡೆಯಬೇಕು. ಉನ್ನತ ಶಿಕ್ಷಣವನ್ನು ಪಡೆದು ಅಭಿವೃದ್ಧಿಯಾಗಬೇಕು. ವಿಕಲಚೇತನರು ವಿಶೇಷಚೇತನರು. ನಿಮ್ಮಲ್ಲಿ ವಿಶೇಷ ಸಾಮರ್ಥ್ಯ, ಜ್ಞಾನ, ಆಲೋಚನೆಯಿಂದ ಅಭಿವೃದ್ಧಿಯಾಗಬೇಕು ಎಂದು ಕಿವಿಮಾತು ಹೇಳಿದರು.

ವಿಕಲಚೇತನರು ಎಲ್ಲಾ ರಂಗದಲ್ಲಿ ಮುಂದೆ ಇದ್ದಾರೆ. ಸಾಧನೆಗೆ ಯಾವುದೇ ಅಂಗವಿಕಲತೆ ಅಡ್ಡಿಯಾಗದು. ಸಾಧನೆಗೆ ಸದೃಢ ಮನಸ್ಸು ಇರಬೇಕು. ಎಲ್ಲರೂ ಸೇರಿ ಸರ್ಕಾರದ ವಿವಿಧ ಸೌಲಭ್ಯಗಳನ್ನು ಅರ್ಹ ವಿಕಲಚೇತನರಿಗೆ ತಲುಪಿಸೋಣ ಎಂದರು.

ಈ ವೇಳೆ ಮಹಿಳಾ ಮತ್ತು (**2ನೇ ಪುಟಕ್ಕೆ**>>>)

## ವಿಧಾನ ಪರಿಷತ್ ಶಾಸಕರಾದ ಎ ವಸಂತಕುಮಾರ ಅವರಿಂದ ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.31**–ವಿಕಲಚೇತನರು ಸರ್ಕಾರದಿಂದ ಕೊಡುವ ತ್ರಿಚಕ್ರ ವಾಹನಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ವಿಧಾನ ಪರಿಷತ್ ಶಾಸಕರಾದ ಎ.ವಸಂತ ಕುಮಾರ್ ಅವರು ಹೇಳಿದರು.

ಡಿಸೆಂಬರ್ 31ರ ಬುಧವಾರ ದಂದು ನಗರದ ಮಂತ್ರಾಲಯ ರಸ್ತೆಯ ಐ.ಬಿಯಲ್ಲಿ ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಲ್ಲಿ ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಕಲಚೇತನರಿಗೆ ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆಗಳ ಮೂಲಕ ಹಲವು ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ವಿಕಲಚೇತನರ ಬಗ್ಗೆ ಸಮಾಜವು ಸೌಜನ್ಯದಿಂದ ವರ್ತಿಸಬೇಕು. ಅವರ ಕುರಿತು ವಿಶೇಷ ಕಾಳಜಿ ವಹಿಸಬೇಕಿದೆ. ಅಲ್ಲದೆ ಮುಂಬರುವ ದಿನಗಳಲ್ಲಿ ಸರಕಾರದಿಂದ ಸಿಗುವ ವಿವಿಧ ಯೋಜನೆಗಳನ್ನು ಸಹ ವಿಕಲಚೇತನರಿಗೆ ಒದಗಿಸಿ ಕೊಡಲು ಪ್ರಾಮಾಣಿಕವಾಗಿ ಸೇವೆ ಮಾಡಲಾಗುವುದೆಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸದಸ್ಯರಾದ ರಝಾಕ್ ಉಸ್ತಾದ್, ಮುಖಂಡರಾದ ಅಸ್ಲಂ ಪಾಶಾ, ಅಂಜಿನ ಕುಮಾರ, ಕೆ.ಇ.ಕುಮಾರ, ರಮೇಶ ರೋಸ್ಲಿ, ಸತ್ಯನಾಥ, ಮೊಹಮ್ಮದ ಉಸ್ಮಾನ, ಸೈಯದ ಸುಲ್ತಾನ, ಖಾಜಾ ಮೊಯಿನುದ್ದೀನ, ದೀಪಕ ರೆಡ್ಡಿ, ಮೊಹಮ್ಮದ ರಫಿ, ಮುನಿಯಪ್ಪ, ನರಸಿಂಹಲು, ನಾಗರಾಜ ಹಾಗೂ ಇತರರು ಇದ್ದರು.

## ತುಂಗಭದ್ರ ನದಿಯ ನೀರು ಇಂದು ಕುಡಿಯುವುದಕ್ಕೂ ಕೂಡ ಯೋಗ್ಯವಾಗಿ ಉಳಿದಿಲ್ಲ: ಮಹಿಮಾ ಪಾಟೀಲ್

ಯುವಮಾರ್ಗ ಸುದ್ದಿ

**ಮಾನ್ವಿ,ಡಿ.31**– ತಾಲೂಕಿನ ಪೋತ್ನಾಳ್ ಗ್ರಾಮದಲ್ಲಿನ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ ಹಾಗೂ ಪರ್ಯಾವರಣ ಟ್ರಸ್ಟ್ ಶಿವಮೊಗ್ಗ,ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ನಿರ್ಮಲ ತುಂಗಭದ್ರಾ ಅಭಿಯಾನ 3 ನೇ ಹಂತದ ಜಲಜಾಗೃತಿ-ಜನಜಾಗ್ರತಿ ಪಾದಯಾತ್ರೆ ಕಾರ್ಯಕ್ರಮದ ವೇದಿಕೆ ಕಾರ್ಯಕ್ರಮಕ್ಕೆ 3 ನೇ ಹಂತದ ನಿರ್ಮಲ ತುಂಗಭದ್ರಾ ಅಭಿಯಾನ ಸಂಚಾಲಕರಾದ ಮಹಿಮಾ ಪಾಟೀಲ್ ಉದ್ಘಾಟಿಸಿ ಮಾತನಾಡಿ ದೇಶದಲ್ಲಿನ 16 ಸಾವಿರ ನದಿಗಳಲ್ಲಿ 6 ಸಾವಿರ ನದಿಯ ಮೂಲ ಉಗಮ ಸ್ಥಾನಗಳು ನಿರಂತರ ಪರಿಸರದ ಮೇಲಿನ ಮಾನವರ ದಾಳಿ ಹಾಗೂ ಮಾಲಿನ್ಯದಿಂದಾಗಿ ಕಣ್ಮರೆಯಾಗಿವೆ ರಾಜ್ಯದಲ್ಲಿ ಇದ್ದ 36 ನೈಸರ್ಗಿಕ ಕೇರೆಗಳಲ್ಲಿ ಇಂದು ಕೇವಲ 3 ಸಾವಿರ ಕೆರೆಗಳು ಮಾತ್ರ ಉಳಿದುಕೊಂಡಿವೇ. ರಾಜ್ಯದಲ್ಲಿ ಹರಿಯುವ ಪ್ರಮುಖ ನದಿಗಳಾದ ತುಂಗಭದ್ರ ಪಶ್ಚಿಮ ಘಟದಲ್ಲಿನ ಶೃಂಗೇರಿಯಿಂದ



15 ಕಿ.ಮೀ.ದೂರದ ವರಹ ಪರ್ವತದಲ್ಲಿನ ಗಂಗಡಿಯಲ್ಲಿ ಉಗಮವಾಗುತ್ತದೆ ಹಾಗೂ 718 ಕಿ.ಮೀ ಹರಿದು ಸಮುದ್ರವನ್ನು ಸೇರುತ್ತದೆ ರಾಜ್ಯದಲ್ಲಿ 693 ಕಿ.ಮೀ. ತುಂಗಭದ್ರ ನದಿ ಹರಿಯುತ್ತದೆ.ಕೃಷ್ಣ ನದಿ 483 ಕಿ.ಮೀ, ಕಾವೇರಿ ನದಿ 320 ಕಿ.ಮೀ.ಹರಿಯುತ್ತದೆ ರಾಜ್ಯದಲ್ಲಿ ಹೆಚ್ಚಿನ ವಿಸ್ತೀರ್ಣದಲ್ಲಿ ಹರಿಯುವ ತುಂಗಭದ್ರ ನದಿ ಯ ಉಗಮ ಸ್ಥಾನದಲ್ಲಿ ಅನೇಕ ಯೋಜನೆಗಳ ಒತ್ತಡ, ತುಂಗಭದ್ರ ನದಿ ತೀರದಲ್ಲಿನ ಶೃಂಗೇರಿಯಿಂದ ಹರಿಹರದ ವರೆಗಿನ ಅತಿಹೆಚ್ಚಿನ ಪುಣ್ಯ ಕ್ಷೇತ್ರಗಳಿರುವುದರಿಂದ ಇಂತಹ ಕ್ಷೇತ್ರಗಳಿಗೆ ಪ್ರತಿನಿತ್ಯ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಂಸ್ಕಾರಿಸಿ ನದಿಗೆ ಬಿಡದೆ ಇರುವುದರಿಂದ ಹಾಗೂ ನದಿ ತೀರದಲ್ಲಿನ ನಗರ.ಪಟ್ಟಣಗಳ ತ್ಯಾಜ್ಯವನ್ನು ಸಂಸ್ಕಾರಿಸಿ ನದಿಗೆ ಬಿಡದೆ ನೇರವಾಗಿ ಬಿಡುತ್ತಿರುವುದರಿಂದ ನದಿಯ ನೀರು ಇಂದು ಕುಡಿಯುವುದಕ್ಕೂ ಕೂಡ ಯೋಗ್ಯವಾಗಿ ಉಳಿದಿಲ್ಲ.ನದಿಯನ್ನು ಭಾವನತ್ಮಕವಾಗಿ ನೋಡದೆ ಪರಿಸರತ್ಮಕವಾಗಿ ನೋಡಬೇಕು. ನಮ್ಮ ರಾಜ್ಯದಲ್ಲಿ ಉಳಿದಿರುವ ನದಿ,ಕೆರೆ,ಹಾಗೂ ನೀರಿನ ಜಲ ಮೂಲಗಳನ್ನು ಸ್ವಚ್ಚವಾಗಿ ಶುದ್ದವಾಗಿ ಉಳಿಸಿಕೊಳ್ಳಬೇಕಾಗಿದೆ ಅದ್ದರಿಂದ ನಿರ್ಮಲ ತುಂಗಭದ್ರಾ ಅಭಿಯಾನವನ್ನು 4 ಹಂತಗಳಲ್ಲಿ ಮಾಡಲಾಗುತ್ತಿದ್ದು 6ನೂರು ಕಿ.ಮೀ.ಪಾದಯಾತ್ರೆ ಮೂಲಕ ಜಲಜಾಗೃತಿ-ಜನಜಾಗ್ರತಿಯನ್ನು ಮೂಡಿಸುವುದರೊಂದಿಗೆ ಪಾದಯಾತ್ರೆಯಲ್ಲಿ ಭಾಗವಹಿಸಿರುವ ತಜ್ಞರು ತುಂಗಭದ್ರನದಿಯನ್ನು ಅಧ್ಯಾಯನ ಮಾಡಿ ವರದಿಯನ್ನು ಸಿದ್ದಪಡಿಸಿ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ಸಮಿತಿಯ ರಾಷ್ಟ್ರೀಯ ಅಧ್ಯಕ್ಷರಾದ ಬಸವರಾಜ್ ಪಾಟೀಲ್ ವೀರಾಪುರ ಮಾತನಾಡಿ ನಮ್ಮ ಸಂಸ್ಥೆಯು ದೇಶದಲ್ಲಿನ 80 ನದಿಗಳು (**2ನೇ ಪುಟಕ್ಕೆ**>>>)

## ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಜನವರಿ 3ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ

ಯುವಮಾರ್ಗ ಸುದ್ದಿ



**ರಾಯಚೂರು,ಡಿ.31**–ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಜನವರಿ 03 ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.


ಅಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ನಿರ್ಗಮಿಸಿ, ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಏರಸ್ಟ್ರೀಪಗೆ 12.50ಕ್ಕೆ ಆಗಮಿಸುವರು. ಜಿಂದಾಲನಿಂದ 1.30ಕ್ಕೆ ಹೊರಟು 2 ಗಂಟೆಗೆ ಸಿಂಧನೂರಿನ ಸರ್ಕ್ಯೂಟ್ ಹೌಸ್ ಹತ್ತಿರದ ಹೆಲಿಪ್ಯಾಡಗೆ ಆಗಮಿಸುವರು. ಮಧ್ಯಾಹ್ನ 2 ಗಂಟೆ ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಸಿಂಧನೂರ ಸರ್ಕ್ಯೂಟ್ ಹೌಸ್ ಹತ್ತಿರದ ಹೆಲಿಪ್ಯಾಡನಿಂದ ನಿರ್ಗಮಿಸಿ, 3.30ಕ್ಕೆ ಸಿಂಧನೂರು ತಾಲ್ಲೂಕಿನ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠದ ಆವರಣದಲ್ಲಿನ ಹೆಲಿಪ್ಯಾಡಗೆ ಆಗಮಿಸಿ, ಅಂಬಾಮಠದ ಆವರ ಣದಲ್ಲಿ ಸಿಂಧನೂರ ತಾಲೂಕಾಡಳಿತ, ತಾಲ್ಲೂಕು ಪಂಚಾಯತ್, ಧಾರ್ಮಿಕ ದತ್ತಿ ಇಲಾಖೆ ಹಾಗೂ ಶ್ರೀ ಅಂಬಾದೇವಿ ವ್ಯವಸ್ಥಾಪನಾ ಸಮಿತಿಯ ಸಂಯುಕ್ತಾಶ್ರ ಯದಲ್ಲಿ ಆಯೋಜಿಸಿರುವ ಶ್ರೀ ಅಂಬಾ ಮಹೋತ್ಸವ-2026ರ ಜಾತ್ರಾ ಮಹೋತ್ಸವ, ಶ್ರೀ ಅಂಬಾದೇವಿ ಮಹಾರಥೋತ್ಸವ ಮತ್ತು ಜಂಬೂ ಸವಾರಿಗೆ ಚಾಲನೆ ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪ ಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಸಂಜೆ 5 ಗಂಟೆಗೆ ಸೋಮಲಾಪುರ ಗ್ರಾಮದ ಶ್ರೀ ಅಂಬಾಮಠದ ಆವರಣದ ಹೆಲಿಪ್ಯಾಡನಿಂದ ನಿರ್ಗಮಿಸಿ, 5.30ಕ್ಕೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಏರಸ್ಟ್ರಿಪಗೆ ತೆರಳಿ, ಅಲ್ಲಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿನತ್ತ ಪ್ರಯಾಣ ಬೆಳೆಸುವರು ಎಂದು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳಾದ ಕೆ.ಚಿರಂಜೀವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನವರಿ 06ರಂದು ಜಿಲ್ಲಾಡಳಿತದಿಂದ ವಿಶ್ವಮಾನವ ದಿನಾಚರಣೆ

**ರಾಯಚೂರು,ಡಿ.31**– ಇಲ್ಲಿಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 2026ರ ಜನವರಿ 06ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವಿಶ್ವಮಾನವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯುಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.



ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶರೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ (**2ನೇ ಪುಟಕ್ಕೆ**>>>)

## ಮಾನವಿ: ಘನ ತ್ಯಾಜ್ಯ ವಿಲೇವಾರಿ ವಾಹನಕೆ ಚಾಲನೆ

ಯುವಮಾರ್ಗ ಸುದ್ದಿ

**ಮಾನ್ವಿ,ಡಿ,31**–ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಪುರಸಭೆ ಕಾರ್ಯಾಲಯ ಆವರಣದಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ ಹಂಪಯ್ಯ ನಾಯಕ ಸಾಹುಕಾರ್ ಇವರು ಮಾನ್ವಿ ಪುರಸಭೆಯ ಘನ ತ್ಯಾಜ್ಯ ವಿಲೇವಾರಿ ವಾಹನಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಶಾಸಕರು ಮಾನ್ವಿ ಪಟ್ಟಣದಲ್ಲಿ ದೈನಂದಿನ ಪುರಸಭೆಯಿಂದ ಆಗುತ್ತಿರುವ ಕಸವಿಲೇವಾರಿ 19.2 ಟನ್ನ ಗಳಷ್ಟು ಇದರಲ್ಲಿ ಶೇಕಡ 60ರಷ್ಟು ಹಸಿಕಸವಿದ್ದರೆ ಶೇಕಡ 40ರಷ್ಟು ಒಣಕಸವನ್ನು (**2ನೇ ಪುಟಕ್ಕೆ**>>>)



# ಮೊದಲನೇಯ ಪುಟದಿಂದ

## ವಿಶ್ವ ವಿಕಲಚೇತನರ ದಿನಾಚರಣೆ ವಿಕಲಚೇತನರು ಸಮಾಜದ ಮುಖ್ಯವಾಹಿನಿಗೆ ಬರಬೇಕು:ಎಡಿಸಿ ಶಿವಾನಂದ

ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ನವೀನ್ ಕುಮಾರ್ ಅವರು ಮಾತನಾಡಿ, ಸರ್ಕಾರ ಯಾವಗ್ಲೂ ನಿಮ್ಮ ಪರ ಇರುತ್ತದೆ. ನೀವು ನಿರಾಶಕ್ತಿಗೊಳ್ಳದೆ. ನಿಮ್ಮ ಸಮಸ್ಯೆಗಳನ್ನು ನಮ್ಮತ್ರ ಹೇಳಿದ್ದಲ್ಲೇ ಸಮಸ್ಯೆಗಳನ್ನು ಬಗೆಹರಿಸಿ ನಾವು ಸದಾ ನಿಮ್ಮ ಪರ ಇರುತ್ತೇವೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ಈಚೆಗೆ ನಡೆದ ಕ್ರೀಡೆಗಳಲ್ಲಿ ವಿಜೇತರಾದ ವಿಕಲಚೇತನರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀದೇವಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಹ ಕಾರ್ಯದರ್ಶಿ ಡಾ.ದಂಡಪ್ಪ ಬಿರಾದಾರ್, ಎಮ್.ಕೆ.ಭಂಡಾರಿ ಆಸ್ಪತ್ರೆಯ ವ್ಯವಸ್ಥಾಪಕರಾದ ರಿಯೋಜ್ ಸೇರಿದಂತೆ ವಿವಿಧ ಸಂಘ ಸಂಸ್ಥೆಯ ಮುಖಂಡರು ಇದ್ದರು.

## ತುಂಗಭದ್ರ ನದಿಯ ನೀರು ಇಂದು ಕುಡಿಯುವುದಕ್ಕೂ ಕೂಡ ಯೋಗ್ಯವಾಗಿ ಉಳಿದಿಲ್ಲ: ಮಹಿಮಾ ಪಾಟೀಲ್

ಅಪಾಯದಲ್ಲಿರುವುದನ್ನು ಗುರುತಿಸಿ ಅವುಗಳಲ್ಲಿ ಗಂಗೆ,ಯಮುನೆ,ಚಂಬಲ್, ಸೇರಿದಂತೆ ಇತರ ನದಿಗಳ ಸ್ವಚ್ಚತೆಗೆ ಕ್ರಮ ಕೈಗೊಳ್ಳಲಾಗಿದೆ ನಮ್ಮ ದೇಶದ ನದಿಗಳಿಗೆ ತನ್ನದೆ ಆದ ಇತಿಹಾಸ ಪವಿತ್ರ ತೆ, ಹರಿಯುವ ಮಾರ್ಗ ಮತ್ತು ಸಮುದ್ರವನ್ನು ಸೇರುವ ಸಂಗನ ಸ್ಥಳವಿರುತ್ತದೆ ಅದ್ದರಿಂದ ನದಿಗಳ ಮಾರ್ಗ ಬದಲಾವಣೆ ಹಾಗೂ ನದಿಗಳ ಜೋಡಣೆ ಮಾಡುವುದರಿಂದ ನದಿಗಳ ಅಸ್ತಿತ್ವಕ್ಕೆ ದಕ್ಕೆ ಉಂಟಾಗುವುದರಿಂದ ಅಂದಿನ ಪ್ರದಾನಿ ಅಟಲ್ ಬಿಹಾರಿ ವಾಜಪೇಯಿಯವರಿಗೆ ನಮ್ಮ ಸಂಸ್ಥೆವತಿಯಿಂದ ವರದಿಯನ್ನು ನೀಡಿದರಿಂದ ನದಿಜೊಡಣೆಯನ್ನು ಬಿಟ್ಟು ಪ್ರವಾಹ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ನೀರನ್ನು ಹರಸಿಕೊಳ್ಳುವುದಕ್ಕೆ ಪೈಪಲೈನ್ ಅಳವಡಿಸುವ ಯೋಜನೆಯನ್ನು ರೂಪಿಸಲಾಯಿತು. ನಮ್ಮ ದೇಶದ ಮೂಲವೇ ಧರ್ಮವಾಗಿದ್ದು .ಧರ್ಮದ ಆದಾರದ ಮೇಲೆ ಸಮಾಜ,ಸಮಾಜದ ಅಧಾರದ ಮೇಲೆ ಸರ್ಕಾರ ನಡೆಯುತ್ತದೆ. ನಮ್ಮ ಭಾರತದ ಸಂಸ್ಕೃತಿಯಲ್ಲಿ ನದಿಗಳಿಗೆ ಮಾತೃಸ್ಥಾನವನ್ನು ನೀಡಲಾಗಿದ್ದು ಅವುಗಳನ್ನು ಮುಂದಿನ ಪಿಳಿಗೆಗೆ ಉಳಿಸಿಕೊಳ್ಳುವ ಜವಾಬ್ದರಿ ಪ್ರತಿಯೊಬ್ಬರ ಮೇಲಿದೆ ಎಂದು ತಿಳಿಸಿದರು.

ದಿವ್ಯ ಸಾನಿಧ್ಯವನ್ನು ಉಟಕನೂರು ಮಠದ ಶ್ರೀ ಮರಿಬಸವಲಿಂಗ ದೇಶಿಕೇಂದ್ರ ಮಹಾಸ್ವಾಮಿ, ಅಡವಿ ಅಮರೇಶ್ವರ ಮಠದ ಶ್ರೀ ತೊಂಟಾದಾರ್ಯ ಮಹಾಸ್ವಾಮಿಗಳು ವಹಿಸಿದರು.

ಪ್ರೊ.ಶ್ರೀಪತಿ ಐ.ಐ.ಟಿ. ಹಾಗೂ ಆರ್ಥಿಕ ಸಲಹೆಗಾರರಾದ ಪ್ರೊ.ಕುಮಾರಸ್ವಾಮಿ ನದಿಯ ಉಳಿವಿನ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದರಾದ ಬಿ.ವಿ.ನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ರಾಜಾ ವೆಂಕಟಪ್ಪ ನಾಯಕ,ಗಂಗಾಧರನಾಯಕ, ಕೃಷಿ ಬೆಲೆ ಅಯೋಗದ ಮಾಜಿ ಅಧ್ಯಕ್ಷರಾದ ಹನುಮನಗೌಡ ಬೆಳಗುರ್ಕಿ, ಜಿಲ್ಲಾ ಸಂಚಾಲಕರಾದ ಎನ್. ಉದಯಕುಮಾರ ಸಾಹುಕಾರ,ತಾ.ಸಂಚಾಲಕರಾದ ಶ್ರೀಧರ ಸ್ವಾಮಿ, ಅನಿತಾನವಲಕಲ್,ಡಾ.ಬಸವರಾಜಪ್ಪ ಪೋತ್ನಾಳ್, ಶರಣಪ್ಪಗೌಡ ನಕ್ಕುಂದಿ, ಶಿವಕುಮಾರ ಮಾಲಿಪಾಟೀಲ್, ಸುಜಾತ,ಜಗದೀಶ ಓತ್ತೂರ್, ಸೇರಿದಂತೆ ಪೋತ್ನಾಳ್ ಗ್ರಾಮದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಗ್ರಾಮಸ್ಥರು,ವಿವಿಧ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿದರು.

ಪೋತ್ನಾಳ್ ಗ್ರಾಮದಿಂದ ಹಿರೇಕೊಟ್ನಕಲ್ ವರೆಗೆ ನಡೆದ ನಿರ್ಮಾ ತುಂಗಭದ್ರ ಅಭಿಯಾನ ಜಲಜಾಗೃತಿ–ಜನಜಾಗೃತಿ ಪಾದಯಾತ್ರೆಯಲ್ಲಿ ನೂರಾರು ಜನರು ಭಾಗವಹಿಸಿದರು.

## ಜನವರಿ 06ರಂದು ಜಿಲ್ಲಾಡಳಿತದಿಂದ ವಿಶ್ವಮಾನವ ದಿನಾಚರಣೆ

ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಜಿಲ್ಲಾ ಗಮಕ ಕಲಾ ಪರಿಷತ್ ಅಧ್ಯಕ್ಷರಾದ ವೆಂಕಟರಾವ್ ಕುಲಕರ್ಣಿ ಅವರು ವಿಶ್ವಮಾನವ ದಿನಾಚರಣೆಯ ಕುರಿತು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾನವಿ: ಘನ ತ್ಯಾಜ್ಯ ವಿಲೇವಾರಿ ವಾಹನಕೆ ಚಾಲನೆ

ಪುರಸಭೆಯ ಕಾರ್ಮಿಕರಿಂದ ಕಸವಿಲಿವಾರಿವಾಗುತ್ತಿದ್ದು. ಪುರಸಭೆ ಕಾರ್ಯಾಲಯದಲ್ಲಿ ಈಗಾಗಲೇ 11 ಆಟೋ,6 ಟ್ರ್ಯಾಕ್ಟರ್ ಗಳು, 2 ಜೆ ಸಿ ಬಿ, 1, ಕಂಪ್ಯಾಕ್ಟರ ( ಲಾರಿ ) ಈ ವಾಹನಗಳಿಂದ ಪುರಸಭೆಯ ಸಿಬ್ಬಂದಿ ವರ್ಗ ಮಾನ್ವಿ ನಗರದ ದೈನಂದಿನ ಸ್ವಚ್ಛತ ಕಾರ್ಯವನ್ನು ನಡೆಸುತ್ತಿದ್ದು. ಮುಂದಿನ ದಿನಗಳಲ್ಲಿ ಮಾನ್ವಿ ಪುರಸಭೆಯು ನಗರಸಭೆನ್ನಾಗಿ ಮೇಲ್ ದರ್ಜೆ ಏರಿದಾಗ ಇನ್ನೂ ಬಹಳಷ್ಟು ಸಿಬ್ಬಂದಿ ವರ್ಗ ಹಾಗೂ ವಾಹನಗಳು ಮಾನ್ವಿ ನಗರಕ್ಕೆ ಬರುವ ಸಾಧ್ಯತೆಯಿದ್ದು ಇರುವ ವಾಹನಗಳಿಂದಲೇ ಮಾನ್ವಿ ನಗರವನ್ನು ಸ್ವಚ್ಛತೆ ಮಾಡುತ್ತಿರುವುದು ಸಿಬ್ಬಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಹಾಗೂ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್,ಪಂಚ ಗ್ಯಾರೆಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ಸೈಯದ್ ಖಾಲಿದ್ ಖಾದ್ರಿ, ರಾಜ ಸುಭಾಷ್ ಚಂದ್ರ ನಾಯಕ್, ಜಯಪ್ರಕಾಶ್, ಡಿ ರಾಮಕೃಷ್ಣ, ಸಾಬೀರ್ ಹುಸೇನ್, ಡಿ ವಿರೇಶ್, ಜಮೀಲ್ ಆಹೆಮದ್, ಸೈಯದ್ ನಜರುದ್ದೀನ್ ಖಾದ್ರಿ, ರೇವಣಸಿದ್ದಯ್ಯ ಸ್ವಾಮಿ, ಸುಕುಮನಿ, ಜಿಲಾನಿ ಕುರೇಶಿ, ವೆಂಕಟೇಶ್ ನಾಯಕ್, ಸತ್ತಾರ್ ಬಂಗ್ಲೆವಲೆ,ಶೇಕ್ ಮಹಿಬೂಬ್ (ಜೂಲಿ ) ರಹಮತ್ ಅಲಿ, ಚಂದ್ರು ಕಾಜಗಾರ್, ಕಾಮೇಶ್ ಮಂದಕಲ್,ಹಂಪಯ್ಯ್ ನಾಯಕ ಬೆಳಗಿನಪೇಟೆ, ರೇಣುಕಾ ರೆಡ್ಡಿ, ಕಮಲಿ ಬಾಬಾ, ಶೇರು, ಪುರಸಭೆಯ ಮುಖ್ಯ ಅಧಿಕಾರಿ ನೈರ್ಮಲ್ಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕ್ರೀಡೆಗಳಿಂದ ಆತ್ಮವಿಶ್ವಾಸ ಹೆಚ್ಚಳ: ಶಾಂತಪ್ಪ ಸೂರನ್



**ಕಲಬುರಗಿ,ಡಿ.31–**ಕ್ರೀಡೆಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ ಎಂದು ಕೆಪಿಇ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಶಾಂತಪ್ಪ ಸೂರನ್ ಹೇಳಿದರು.

ನಗರದ ಕೆಪಿಇ ಶಿಕ್ಷಣ ಸಂಸ್ಥೆಯ ಪ್ರಜ್ಞಾ ಆಂಗ್ಲ ಮಾಧ್ಯಮಿಕ ಶಾಲೆಯಲ್ಲಿ ದಿನಾಂಕ ಹಮ್ಮಿಕೊಂಡಿದ್ದ 2025ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆಗಳು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತವೆ. ಆಟದ ಮೂಲಕ ಸಂತೋಷ ಮತ್ತು ಉತ್ಸಾಹ ಸಿಗುತ್ತದೆ. ಏಕಾಗ್ರತೆ ಹೆಚ್ಚಿಸುತ್ತದೆ ಮತ್ತು ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ .ಇತರರೊಂದಿಗೆ ಬೆರೆಯಲು, ಹಾಗೂ ಸಂವಹನ ನಡೆಸಲು ಮತ್ತು ಸಾಮಾಜಿಕ ಸಂಬಂಧಗಳನ್ನು ಬೆಳೆಸಲು ಸಹಾಯ

ಮಾಡುತ್ತವೆ ಎಂದರು. ಮುಖ್ಯಅತಿಥಿಗಳಾದ ಕೆಪಿಇ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿಗಳಾದ ಡಾ. ಚಂದ್ರಶೇಖರ್ ಶೀಲವಂತ ಮಾತನಾಡುತ್ತಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ , ಸೃಜನಶೀಲತೆ ಮತ್ತು ಕೌಶಲ್ಯಗಳನ್ನು ಪ್ರೋತ್ಸಾಹಿಸುವುದು. ಕ್ರೀಡೆಗಳು ಕೇವಲ ಮನರಂಜನೆ ಮಾತ್ರವಲ್ಲ, ಜೀವನದ ಒಂದು ಅವಿಭಾಜ್ಯ ಭಾಗ. ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿರಲು, ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು, ಮತ್ತು ಜೀವನದಲ್ಲಿ ಯಶಸ್ವಿಯಾಗಲು ಕ್ರೀಡೆಗಳ ಪಾತ್ರ ಮಹತ್ತರವಾಗಿದೆ. ಆದ್ದರಿಂದ, ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಕ್ರೀಡೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು. ಅತಿಥಿಗಳಾಗಿ ಆಗಮಿಸಿರುವ ಆರ್ಯನ್ ಸ್ಕೂಲಿನ ಆಡಳಿತ ಅಧಿಕಾರಿಗಳಾದ ಬಜರಂಗ ಸಿಂಗ್ ಚೌಹಾಣ್ ಅವರು ಮಾತನಾಡುತ್ತ ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು ಬೆಳೆಯುತ್ತವೆ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ವೃದ್ಧಿಸುತ್ತದೆ. ಸಹಿಷ್ಣುತೆ ಗೆಲುವು–ಸೋಲುಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದರು.

ಅಜೀಮ್ ಪ್ರೇಮ್ ಜಿ ಫೌಂಡೇಶನ್ ವ್ಯವಸ್ಥಾಪಕರಾದ ಮಾದೇವ್ ಮುಲ್ಗೆ ಅವರು ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಪ್ರಾಥಮಿಕ ಶಾಲೆಯ ಮುಖ್ಯಮ ಇದ್ದ ಗುರುಗಳಾದ ಕುಮಾರಿ ಶಿಲ್ಪಾ ಸಿಂಗೆ ಪ್ರೌಢಶಾಲೆಯ ಮುಖ್ಯ ಗುರುಗಳಾದ ಮಂಜುಳಾ ಹಾಗರಗಿ ಹಾಗೂ ಶಾಲೆಯ ಎಲ್ಲಾ ಶಿಕ್ಷಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಶಾಸಕ ರಾಜುಗೌಡ ಚಾಲನೆ



ಯುವಮಾರ್ಗ ಸುದ್ದಿ

**ತಾಳಿಕೋಟೆ,ಡಿ.31–** ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯ ಬೋಳವಾಡ ಗ್ರಾಮದಲ್ಲಿ ಸುಮಾರು 44.50 ಲಕ್ಷ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ರಾಜು ಗೌಡ ಪಾಟೀಲ( ಕು.ಸಾಲವಾಡಗಿ) ಚಾಲನೆ ನೀಡಿದರು. ಮಂಗಳವಾರ ತಾಲೂಕಿನ ಬೋಳವಾಡ ಗ್ರಾಮದಲ್ಲಿ ಕೆ ಆರ್ ಐ ಡಿ ಎಲ್ ಇಲಾಖೆಯ ರೂ.20 ಲಕ್ಷ ಮೊತ್ತದ ಡಾ.ಅಂಬೇ ಡ್ಕರ್ ಸಮುದಾಯ ಭವನ,ಶಾಸಕರ ಅನುದಾನದ ರೂ.10 ಲಕ್ಷ ಮೊತ್ತದ ಶ್ರೀ ಮಾರುತೇಶ್ವರ ದೇವಸ್ಥಾನ ಸಮುದಾಯ ಭವನ,ಜಿಪಂ ಹಾಗೂ ಪಂಚಾಯತ್ ರಾಜ್ ಇಲಾಖೆಯ ರೂ 14.50 ಲಕ್ಷ ಮೊತ್ತದ ಸರ್ಕಾರಿ ಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಅವರು ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ನಂತರ ಗ್ರಾಮಸ್ಥರು ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು ಇವತ್ತು ಚಾಲನೆ ನೀಡಿದ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರುವುದರ ಜೊತೆಗೆ ನಿಗದಿತ ಸಮಯದಲ್ಲಿ ಮುಗಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ್ದೇನೆ. ಎಲ್ಲ ಕಾಮಗಾರಿಗಳು ಸುಗಮವಾಗಿ ಮುಕ್ತಾಯವಾಗುವಂಥಾಗಲು ಗ್ರಾಮಸ್ಥರ ಸಹಕಾರ ಅವರೊಂದಿಗಿರಲಿ ಎಂದರು. ಜೆಡಿಎಸ್ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ ಮಾತನಾಡಿ ಶಾಸಕ ರಾಜು ಗೌಡರು ನುಡಿದಂತೆ ನಡೆಯುವ ವ್ಯಕ್ತಿಗಳಾಗಿದ್ದು ಈಗಾಗಲೇ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಅವರಿಗೆ ನಾವೆಲ್ಲರೂ ಸಹಕರಿಸುವ ಅಗತ್ಯ ಇದೆ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ರಾಜುಗೌಡ ಪಾಟೀಲರಿಗೆ ಗ್ರಾಮಸ್ಥರು ವತಿಯಿಂದ ಸನ್ಮಾನಿಸಿ ಗೌರವಿಸ 'ಲಾಯಿತು. ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷೆ ಸರೋಜಾಬಾಯಿ ಮ.ಮಸರಕಲ್ಲ, ಮುಖಂಡರಾದ ಸಾಹೇಬಗೌಡ ಬಿರಾದಾರ, ಮಡುಸೌಕಾರ ಬಿರಾದಾರ, ಮಲ್ಲನಗೌಡ ಪೊಲೀಸ್ ಪಾಟೀಲ, ರಾಜುಗೌಡ ಕೋಳೂರ, ನಿಂಗನಗೌಡ ಬಿರಾದಾರ, ನಿಂಗು ಕಲಬುರ್ಗಿ, ಜೈಭೀಮ ಮುತ್ತಗಿ, ವೀರೇಶ ಕಾರಗನೂರ, ಜಗನ್ನಾಥ್ ಮಸರ್ಕಲ್, ಬಸನಗೌಡ ಹಳ್ಳಿಪಾಟೀಲ, ಮುಖ್ಯ ಗುರುಮಾತೆ ಎಚ್.ಎಂ. ಮೂಲಿಮನಿ, ಗುತ್ತಿಗೆದಾರ ಶಶಿಕಾಂತ್ ಕುಬರೆಡ್ಡಿ, ದೊಡ್ಡಪ್ಪ ಹರಿಜನ, ಈರಪ್ಪ ಹರಿಜನ, ಪರಪ್ಪ ಹರಿಜನ್ ಸಿದ್ದಪ್ಪ ಹರಿಜನ್ ಹಾಗೂ ಗ್ರಾಮಸ್ಥರು ಇದ್ದರು.

## ನಿಮ್ಮ ಋಣ ತೀರಿಸುವ ಕಾರ್ಯ ಮಾಡುತ್ತೇನೆ: ಶಾಸಕ ರಾಜುಗೌಡ

ಯುವಮಾರ್ಗ ಸುದ್ದಿ

**ತಾಳಿಕೋಟೆ,ಡಿ.31–** ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕೊರತೆ ಇದ್ದರೂ ಶಕ್ತಿಮೀರಿ ಪ್ರಯತ್ನಪಟ್ಟು ಅನುದಾನ ತಂದು ಮೂಲ ಸೌಕರ್ಯಗಳಿಗಾಗಿ ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇನೆ ಉಳಿದ ಕಾರ್ಯಗಳನ್ನೂ ಹಂತ ಹಂತವಾಗಿ ಮಾಡುತ್ತೇನೆ ಅಭಿವೃದ್ಧಿ ಕಾರ್ಯಗಳಲ್ಲಿ ನನಗೆ ನಿಮ್ಮೆಲ್ಲರ ಸಹಕಾರದ ಅಗತ್ಯವಿದೆ ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ(ಕು.ಸಾಲವಾಡಗಿ) ಹೇಳಿದರು. ಮಂಗಳವಾರ ತಾಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ ನೂತನ ಗ್ರಾಮ ಪಂಚಾಯತ್ ಕಾರ್ಯಾಲಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯ ರೂಪದಲ್ಲಿ ತರಲು ಗ್ರಾಮ ಪಂಚಾಯತ್ ಪ್ರಮುಖ ಪಾತ್ರ ವಹಿಸುತ್ತದೆ, ಇಲ್ಲಿ ಸುಸಜ್ಜಿತವಾದ ಕಾರ್ಯಾಲಯ ನಿರ್ಮಾಣವಾಗಿದೆ ಇದರ ಮೂಲಕ ಅಭಿವೃದ್ಧಿ ಕಾರ್ಯಗಳಾಗಿ ಇದರ ವ್ಯಾಪ್ತಿಗೆ ಬರುವ ಗ್ರಾಮಗಳ ಜನರಿಗೆ ಅನಕೂಲವಾಗಬೇಕಾಗಿದೆ. ಕಾರ್ಯಾಲಯ ನಿರ್ಮಾಣಕ್ಕೆ ಭೂದಾನ ಮಾಡಿದ ದಿ.ತಿಮ್ಮವ್ವ ಯಮನಪ್ಪ ಮಸರಕಲ್ಲ ಹಾಗೂ ಅವರ ಕುಟುಂಬದ ಸದಸ್ಯರಿಗೆ ಅಭಿನಂದಿಸುತ್ತೇನೆ ಎಂದರು. ಕಾಂಗ್ರೆಸ್ ಮುಖಂಡ ಸುರೇಶಗೌಡಧಣಿ ನಾಡಗೌಡ ( ಬಿಂಜಲಭಾವಿ) ಮಾತನಾಡಿ ಪಂಚಾಯತ್ ಕಾರ್ಯಾಲಯಕ್ಕೆ ಭೂಮಿ ದಾನಮಾಡಿದ ದಾನಿಗಳು ಇಂದು ನಮ್ಮ ಮಧ್ಯೆ ಇಲ್ಲದಿದ್ದರೂ ಅವರನ್ನು ಸದಾ ಸ್ಮರಿಸುವಂತಹ ಕಾರ್ಯ ಮಾಡಿ ಹೋಗಿದ್ದಾರೆ, ಇಂದು ಸಮಾಜದಲ್ಲಿ ಶ್ರೀಮಂತರ ಕೊರತೆ ಇಲ್ಲ ಶ್ರೀಮಂತ ಮನಸ್ಸುಗಳ ಕೊರತೆ ಇದೆ. ಎಲ್ಲರೂ ಒಂದಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡುವ ಅಗತ್ಯವಿದೆ ಎಂದರು. ಜೆಡಿಎಸ್ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ ಮಾತನಾಡಿ ಶಾಸಕ ರಾಜುಗೌಡರು ಆಯ್ಕೆಯಾದ ನಂತರ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ ಅವರೊಬ್ಬ ಸರಳ ಸಜ್ಜನ ರಾಜಕಾರಣಿ ಅವರು ಇನ್ನೂ ಹೆಚ್ಚಿನ ಕೆಲಸ ಮಾಡಲು ನಮ್ಮೆಲ್ಲರ ಸಹಕಾರ ಅವರಿಗೆ ಅಗತ್ಯವಿದೆ ಎಂದರು. ಪಿಡಿಓ ಪ್ರಭು ಚನ್ನೂರ ಪ್ರಾಸ್ತಾವಿಕವಾಗಿ ಮಾತನಾಡಿದರು.ಇದೇ ಸಂದರ್ಭದಲ್ಲಿ ಕಾರ್ಯಾಲಯಕ್ಕೆ ಭೂದಾನ ಮಾಡಿದ ದಿವಂಗತ ತಿಮ್ಮವ್ವ ಯಮನಪ್ಪ ಮಸರಕಲ್ಲ ಅವರ ಪುತ್ರಿ ಬಸಮ್ಮ ಯಮನಪ್ಪ ಮಸರಕಲ್ಲ ಇವರನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ತಾಪಂ ಇಓ ಅನಸೂಯಾ ಚಲವಾದಿ, ಗ್ರಾಪಂ ಅಧ್ಯಕ್ಷೆ ಸರೋಜಾಬಾಯಿ ಮ.ಮಸರಕಲ್ಲ, ಉಪಾಧ್ಯಕ್ಷೆ ಭರಮವ್ವ ಸಿ.ಕಾಳಗಿ, ಜೆಡಿಎಸ್ ತಾಲೂಕ ಅಧ್ಯಕ್ಷ ಮಡು ಸಾಹುಕಾರ ಬಿರಾದಾರ, ಪಿಕೆಪಿಎಸ್ ಅಧ್ಯಕ್ಷ ಶಿವಣ್ಣ ಕಲ್ಬುರ್ಗಿ, ಗ್ರಾಪಂ ಸದಸ್ಯ ಯಮನಪ್ಪ ಮಸರಕಲ್ಲ,ಜೆ.ಡಿ.ಎಸ್ ಜಿಲ್ಲಾ ಉಪಾಧ್ಯಕ್ಷ ಸಾಹೇಬಗೌಡ ಬಿರಾದಾರ(ಲಕ್ಕುಂಡಿ),ಸಂಗನಗೌಡ ಅಸ್ಕಿ, ಕರವೇ ಜಿ.ಸಂ.ಕಾರ್ಯದರ್ಶಿ ಜೈಭೀಮ್ ಮುತ್ತಗಿ, ಪ್ರಭುಗೌಡ ನಾಡಗೌಡ(ಶಳ್ಳಗಿ), ನಿಂಗನಗೌಡ ಬಿರಾದಾರ, ನಿಂಗಪ್ಪ ಕಲ್ಬುರ್ಗಿ, ಸಂಗಮೇಶ



ದೇಸಾಯಿ, ವೀರೇಶ ಕಾರಗನೂರ, ಜಗನ್ನಾಥ್ ಮಸರಕಲ್ಲ, ಗ್ರಾಪಂ ಸದಸ್ಯರಾದ ಮಲ್ಲನಗೌಡ ಪಾಟೀಲ, ಸಾಬವ್ವ ಹರಿಜನ್, ಕರೇಮ್ಮ ಬಿರಾದಾರ, ಶಿವಶಂಕರ್ ಕಟ್ಟಿಮನಿ, ಭಾಗಿರತಿ ಬಿರಾದಾರ, ಜಂಗಮಯ್ಯ ಹಿರೇಮಠ, ಕಸ್ತೂರಿಬಾಯಿ ಹೆಬ್ಬಾಳ, ಶಂಕ್ರಮ್ಮ ರಂಜಣಗಿ, ಬಾಗಣ್ಣ ಮೇಟಿ, ಚೆನ್ನಮ್ಮ ನಾಟಿಕಾರ, ಕಾರ್ಯದರ್ಶಿ ಹಣಮಂತ್ರಾಯ ಚೌಧರಿ ಹಾಗೂ ತಾಪಂ ಸಿಬ್ಬಂದಿಗಳು ಇದ್ದರು. ಶಿಕ್ಷಕ ಸಿದ್ದು ಕರಡಿ ನಿರೂಪಿಸಿದರು.

# ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ ಕುರಿತು ಮಹಿಳಾ ಪೊಲೀಸ್ ಅಧಿಕಾರಿಗಳಿಗೆ ಕಾರ್ಯಾಗಾರ



**ಬೀದರ್:ಡಿ.31**–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ಸಂಯುಕ್ತಾಶ್ರಯದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಅಧಿನಿಯಮ–2013 ಕುರಿತು ಮಹಿಳಾ ಪೊಲೀಸ್ ಹಾಗೂ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಹಿರಿಯ ವಕೀಲ ಶ್ರೀ ಬಿ.ಎಸ್. ಪಾಟೀಲ್ ಅವರು ಅಧಿನಿಯಮದ ವಿಧಿ ವಿಧಾನಗಳ ಕುರಿತು ವಿವರಿಸಿದರು. ಕೆಲಸದ ಸ್ಥಳದಲ್ಲಿ ಆಂತರಿಕ ದೂರು ಸಮಿತಿಯ ರಚನೆ ಕಡ್ಡಾಯವಾಗಿದ್ದು, ಸಮಿತಿಯ ಅಧ್ಯಕ್ಷರಾಗಿ ಹಿರಿಯ ಶ್ರೇಣಿಯ ಮಹಿಳಾ ಉದ್ಯೋಗಸ್ಥೆ ಇರಬೇಕೆಂದು ತಿಳಿಸಿದರು. ಸಮಾಜ ಕಲ್ಯಾಣ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಹಾಗೂ ಕಾನೂನು ಜ್ಞಾನವಿರುವ ಇಬ್ಬರು ಸದಸ್ಯರು ಹಾಗೂ ಮಹಿಳೆಯರ ಉನ್ನತಿಗಾಗಿ ಕಾರ್ಯನಿರ್ವಹಿಸುವ ಸಂಘ–ಸಂಸ್ಥೆಗಳ ಸದಸ್ಯರು ಸಮಿತಿಯಲ್ಲಿ ಇರಬೇಕೆಂದು ಹೇಳಿದರು. ಪ್ರತಿ ಮೂರು ವರ್ಷಗಳಿಗೊಮ್ಮೆ ಆಂತರಿಕ ದೂರು ಸಮಿತಿಯನ್ನು ಪುನರ್‌ರಚನೆ ಮಾಡಬೇಕೆಂದು ಅವರು ತಿಳಿಸಿದರು.

ಶ್ರೀಮತಿ ರೋಮಾ (ಮಿಷನ್ ಶಕ್ತಿ) ಅವರು ಆಂತರಿಕ ದೂರು ಸಮಿತಿ ರಚಿಸಿ ಖಿಜ–ಃಠಥ ಆನ್‌ಲೈನ್ ಪೋರ್ಟಲ್ನಲ್ಲಿ ನೋಂದಣಿ ಮಾಡುವ ವಿಧಾನ ಕುರಿತು ಮಾಹಿತಿ ನೀಡಿದರು.ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಪ್ರದೀಪ ಗುಂಟೆ ಅವರು ಉದ್ಘಾಟಿಸಿದರು. ಅತಿಥಿಗಳಾಗಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಚಂದ್ರಕಾಂತ್ ಪೂಜಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಶ್ರೀಮತಿ ರೂಪಾ ಕೋಟೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ಶಾರದಾ, ಹಿರಿಯ ವಕೀಲ ಶ್ರೀ ಬಿ.ಎಸ್. ಪಾಟೀಲ್, ಎಸ್‌ಪಿ ಕಚೇರಿ ಸಿಬ್ಬಂದಿ ಶ್ರೀಮತಿ ಶ್ರೀದೇವಿ, ಸಖಿ ಆಡಳಿತಾಧಿಕಾರಿ ಶ್ರೀಮತಿ ಸಂಗೀತಾ ಪಾಟೀಲ್, ಸಚಿನ್ ಪಾಟೀಲ್, ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರದ ರೇಣುಕಾ ತಾಂದಳೆ ಸೇರಿದಂತೆ ಮಹಿಳಾ ಪೊಲೀಸ್ ಹಾಗೂ ಅಧಿಕಾರಿಗಳು ಭಾಗವಹಿಸಿದ್ದರು.ಕಾರ್ಯಕ್ರಮದ ನಿರೂಪಣ 'ಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಶ್ರೀ ಗೌರಿಶಂಕರ ಅವರು ನೆರವೇರಿಸಿದರು.

## ಡಾ. ಜಯದೇವಿ ತಾಯಿ ಲಿಗಾಡೆ,ಪ್ರಭುರಾವ್ ಕಂಬಳಿವಾಲೆ ಹೆಸರಿನಲ್ಲಿ ಟ್ರಸ್ಟ್ ರಚನೆ: ಸರ್ಕಾರದ ನಿರ್ಧಾರಕ್ಕೆ ಕಲಾವಿದರ ಒಕ್ಕೂಟ ಸ್ವಾಗತ



**ಬೀದರ:ಡಿ.31**–ಕನ್ನಡದ ಹಿರಿಯ ಸಾಹಿತಿ, ಡಾ. ಜಯದೇವಿ ತಾಯಿ ಲಿಗಾಡೆ ಹಾಗೂ ಕಂಬಳಿವಾಲೆ ಅವರ ಹೆಸರಿನಲ್ಲಿ ಟ್ರಸ್ಟ್ ಕೈಗೊಂಡಿರುವುದನ್ನು ಕಲ್ಯಾಣ ಕರ್ನಾಟಕ

ಈ ಕುರಿತು ಪ್ರತಿಕ್ರಿಯಿಸಿದ ಒಕ್ಕೂಟದ ಈ ಟ್ರಸ್ಟ್ ರಚನೆ ಒಕ್ಕೂಟದ ಬಹುದಿನಗಳ ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಲ್ಲಿಸಲಾಗಿತ್ತು. ಇದೀಗ ಸರ್ಕಾರ ಸಾಹಿತ್ಯ, ಸಂಸ್ಕೃತಿ ಹಾಗೂ ಹೋರಾಟ ಎಂದು ಹೇಳಿದರು.

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಮಾಜ

ಪ್ರಖ್ಯಾತ ಲೇಖಕಿ ಹಾಗೂ ಸಮಾಜಸೇವಕಿ ಕನ್ನಡ ಹೋರಾಟಗಾರರಾದ ಪ್ರಭುರಾವ್ ರಚಿಸಲು ರಾಜ್ಯ ಸರ್ಕಾರ ನಿರ್ಧಾರ ಕಲಾವಿದರ ಒಕ್ಕೂಟ ಹರ್ಷದಿಂದ ಸ್ವಾಗತಿಸಿದೆ.

ಅಧ್ಯಕ್ಷ ವಿಜಯಕುಮಾರ್ ಸೋನಾರೆ ಅವರು, ಬೇಡಿಕೆಯಾಗಿತ್ತು. ಈ ಬಗ್ಗೆ ಈ ಹಿಂದೆ ಮಾನ್ಯ ಸಚಿವರಿಗೆ ಹಲವು ಬಾರಿ ಮನವಿ ಪತ್ರ ಸಕಾರಾತ್ಮಕವಾಗಿ ಸ್ಪಂದಿಸಿರುವುದು ಕನ್ನಡ ಪರಂಪರೆಗೆ ದೊರೆತ ಮಹತ್ವದ ಗೌರವವಾಗಿದೆ

ಸೇವೆಗೆ ಅಪಾರ ಕೊಡುಗೆ ನೀಡಿದ ಡಾ. ಜಯದೇವಿ ತಾಯಿ ಲಿಗಾಡೆ ಹಾಗೂ ಕನ್ನಡ ಹೋರಾಟದ ಮುಂಚೂಣಿಯಲ್ಲಿದ್ದ ಪ್ರಭುರಾವ್ ಕಂಬಳಿವಾಲೆ ಅವರ ಸ್ಮರಣಾರ್ಥ ಟ್ರಸ್ಟ್ ಸ್ಥಾಪನೆಯಿಂದ ಮುಂದಿನ ತಲೆಮಾರಿಗೆ ಪ್ರೇರಣೆ ದೊರೆಯಲಿದೆ ಎಂದು ಒಕ್ಕೂಟ ಅಭಿಪ್ರಾಯಪಟ್ಟಿದೆ.

ಈ ಮಹತ್ವದ ನಿರ್ಧಾರ ಕೈಗೊಂಡ ರಾಜ್ಯ ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ್ ತಂಗಡಗಿ, ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಹಾಗೂ ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್ ಅವರಿಗೆ ಕಲ್ಯಾಣ ಕರ್ನಾಟಕ ಕಲಾವಿದರ ಒಕ್ಕೂಟದ ವತಿಯಿಂದ ಧನ್ಯವಾದಗಳು ಮತ್ತು ಅಭಿನಂದನೆಗಳನ್ನು ಸಲ್ಲಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಜಯಕುಮಾರ್ ಸೋನಾರೆ ತಿಳಿಸಿದ್ದಾರೆ.

# ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರದ ಸಮಾರೋಪ




**ಬೀದರ್:ಡಿ.31**–ಬೀದರ್ ನಗರದ ಪನ್ನಾಲಾಲ್ ಹೀರಾಲಾಲ ಪದವಿಪೂರ್ವ ಕಾಲೇಜಿನ ವತಿಯಿಂದ ದತ್ತ ಗ್ರಾಮ ನಾವದಗಿರಿಯಲ್ಲಿ 2025–26ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಅಡಿಯಲ್ಲಿ ಆಯೋಜಿಸಲಾಗಿದ್ದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಮಂಗಳವಾರ ನಡೆಯಿತು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಷ್ಟ್ರಭಾಷಾ ಸಂವರ್ಧನ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಬ್ರಿಜ್ ಕಿಶೋರ್ ಮಲಾಣಿ ಅವರು ವಹಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜಾಗೃತಿ, ಸೇವಾಭಾವನೆ ಮತ್ತು ರಾಷ್ಟ್ರಪ್ರೇಮವನ್ನು ಬೆಳೆಸುವುದು ಇದರ ಮುಖ್ಯ ಉದ್ದೇಶವಾಗಿದೆ.

ವಾರ್ಷಿಕವಾಗಿ ನಿಯಮಿತ ಚಟುವಟಿಕೆಗಳ ಜೊತೆಗೆ ವಿಶೇಷ ಶಿಬಿರಗಳನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ನೈಜ ಜೀವನದ ಅನುಭವ ನೀಡುತ್ತವೆ. ಇದರಿಂದ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳು, ಶಿಸ್ತಿನ ಮನೋಭಾವ ಮತ್ತು ಸಮಾಜದ ಮೇಲಿನ ಹೊಣೆಗಾರಿಕೆ ಹೆಚ್ಚಾಗುತ್ತದೆ ಸಮಾಜ ಸೇವೆಯ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಮಹತ್ವದ ವೇದಿಕೆಯಾಗಿ ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಪಾತ್ರವಾಗಿದೆ ಎಂದು ಕಿವಿ ಮಾತು ಹೇಳಿದ್ದರು.ಮುಖ್ಯ ಅತಿಥಿಯಾಗಿ ಪನ್ನಾಲಾಲ್ ಹೀರಾಲಾಲ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಸುಧಾರಾಣಿ ಬಿರಾದರ್ ಅವರು ಭಾಗವಹಿಸಿದ್ದರು.ಅತಿಥಿಗಳಾಗಿ ಸ್ವಾಗತ ಗೀತೆಯನ್ನು ಹಾಡಿದ ಸಂಗೀತ ಲದ್ದೆ, ಕಾಲೇಜಿನ ಪ್ರಾಚಾರ್ಯರಾದ ಶ್ರೀ ಅಂಬಾದಾಸ್ ಮೊರೆ, ಅರ್ಥಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಸವಿತಾ, ಇತಿಹಾಸ ಉಪನ್ಯಾಸಕ ಶ್ರೀ ರಮೇಶ್ ಪಾಟಿಲ್, ಕವಿರಾಜ್ ಬಿರಾದರ್, ಸುಮತಿ ಪಡಶೆಟ್ಟಿ ಹಾಗೂ ಎನ್‌ಎಸ್‌ಎಸ್ ಘಟಕದ ಶಿಬಿರಾಧಿಕಾರಿ ಮತ್ತು ದೈಹಿಕ ಶಿಕ್ಷಣ ಉಪನ್ಯಾಸಕರಾದ ಶ್ರೀ ಬಸವರಾಜ್ ವಿ. ಭಾವರಾ ಅವರು ಅತಿಥಿ ಸ್ಥಾನಗಳನ್ನು ಅಲಂಕರಿಸಿದರು.

ಶಿಬಿರದ ಅನುಭವಗಳನ್ನು ದ್ವಿತೀಯ ಪಿಯುಸಿ ಕಲಾ ವಿಭಾಗದ ವಿದ್ಯಾರ್ಥಿನಿ ಕುಮಾರಿ ರೇಖಾ ಮಾಣಿಕರಾವ್ ಅವರು ಹಂಚಿಕೊಂಡರು. ಕಾರ್ಯಕ್ರಮದ ನಿರೂಪಣೆಯನ್ನು ರಾಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ಹೋಮಪತಿ ಕುಲಕರ್ಣಿ ಅವರು ನೆರವೇರಿಸಿದರು. ವಂದನಾರ್ಪಣೆಯನ್ನು ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕುಮಾರಿ ಅಪರ್ಣ ಡೇವಿಡ್ ಅವರು ಸಲ್ಲಿಸಿದರು.

ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿ ವರ್ಗದವರು ಹಾಗೂ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದರು.

# ಕೃಷಿಭೂಮಿಗಳ ಮಣ್ಣು ಸಮೀಕ್ಷೆ

**ನವಲಗುಂದ,ಡಿ31**– ಕೇಂದ್ರ ಸರ್ಕಾರದ ಕೃಷಿ ಹಾಗೂ ರೈತರ ಕಲ್ಯಾಣ ಇಲಾಖೆ ಅಧೀನದಲ್ಲಿರುವ ಮಣ್ಣು ಮತ್ತು ಭೂಬಳಕೆ ಸಮೀಕ್ಷಾ ಸಂಸ್ಥೆ ಬೆಂಗಳೂರು ಕೇಂದ್ರದ ತಂಡವು ತಾಲ್ಲೂಕಿನ ಕೃಷಿಭೂಮಿಗಳಲ್ಲಿ ವಿವರವಾದ ಮಣ್ಣು ಸಮೀಕ್ಷೆಯನ್ನು ನಡೆಸುತ್ತಿದೆ.



ಡಾ. ಮಲ್ಲಿಕಾರ್ಜುನ ರೂಡಗಿ, ಕೆ. ಮುರಗಯ್ಯ ಮತ್ತು ನವೀನ್ ಕುಮಾರ್ ಅವರನ್ನು ಒಳಗೊಂಡ ತಂಡವು ಧಾರವಾಡ ಜಿಲ್ಲೆಯ ನವಲಗುಂದ, ಅನ್ನಿಗೇರಿ ಹಾಗೂ ಹುಬ್ಬಳ್ಳಿ ತಾಲ್ಲೂಕುಗಳಲ್ಲದೆ, ಗದಗ ಜಿಲ್ಲೆಯ ನರಗುಂದ, ರೋಣ ಹಾಗೂ ಗದಗ ತಾಲ್ಲೂಕುಗಳ ಕೃಷಿಭೂಮಿಗಳಲ್ಲಿ ಮಣ್ಣು ಸಮೀಕ್ಷಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಪಟ್ಟಣದ ಹೊರವಲಯದಲ್ಲಿ ಜಮೀನೊಂದರಲ್ಲಿ ಮಣ್ಣು ಸಮೀಕ್ಷೆ ನಡೆಸುತ್ತಿರುವ ಡಾ. ಮಲ್ಲಿಕಾರ್ಜುನ ರೂಡಗಿ ಮಾತನಾಡಿ ದೇಶಾದ್ಯಂತ ಮಣ್ಣು ಸಮೀಕ್ಷೆಗಳನ್ನು ನಡೆಸುವ ಕೇಂದ್ರ ಸರ್ಕಾರದ ಶ್ರೇಷ್ಠ ಸಂಸ್ಥೆಯಾದ ಮಣ್ಣು ಮತ್ತು ಭೂಬಳಕೆ ಸಮೀಕ್ಷಾ ಸಂಸ್ಥೆ ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಮಣ್ಣು ನಕ್ಷೆ ಕಾರ್ಯಕ್ರಮ ವನ್ನು ಮುನ್ನಡೆಸುತ್ತಿದೆ. ಉಪಗ್ರಹ ಆಧಾರಿತ ದೂರ ಸಂವೇದಿ ಹಾಗೂ ಭೌಗೋಳಿಕ ಮಾಹಿತಿ ವ್ಯವಸ್ಥೆ ತಂತ್ರಜ್ಞಾನ ಬಳಸಿ 1:10,000 ಪ್ರಮಾಣದ ನಕ್ಷೆಗಳಲ್ಲಿ ಗ್ರಾಮ ಮಟ್ಟದ ವಿವರವಾದ ಡಿಜಿಟಲ್ ಮಣ್ಣು ದತ್ತಾಂಶವನ್ನು ಸೃಷ್ಟಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಮಣ್ಣು ಸಂಪನ್ಮೂಲಗಳ ನಕ್ಷೆಕರಣದಿಂದ ಗ್ರಾಮ ಮಟ್ಟದ ಸೂಕ್ಷ್ಮ ಯೋಜನೆಗೆ ಮತ್ತು ರೈತರಿಗೆ ಅಗತ್ಯ ಮಾಹಿತಿಯನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದರು.

ಕೆ. ಮುರಗಯ್ಯ ಮಾತನಾಡಿ, ಈ ಸಮೀಕ್ಷೆಯ ಮೂಲಕ ಮಣ್ಣಿನ ಪ್ರಕಾರಗಳು, ಅವುಗಳ ಲಕ್ಷಣಗಳು, ಸಾಮರ್ಥ್ಯಗಳು ಹಾಗೂ ಭೂಬಳಕೆಗೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಭೂ–ಅವನತಿ ಸಮಸ್ಯೆಗಳಾದ ಮಣ್ಣು ಸವಕಳಿ, ನೀರು ನಿಲ್ಲುವಿಕೆ, ಸವಳು ಮಣ್ಣು ಮೊದಲಾದವುಗಳನ್ನು ವೈಜ್ಞಾನಿಕವಾಗಿ ಗುರುತಿಸಲಾಗುತ್ತದೆ ಎಂದು ತಿಳಿಸಿದರು.

ಇದರಿಂದ ಪೋಷಕಾಂಶಗಳ ಕೊರತೆ ಅಥವಾ ಹೆಚ್ಚಳವನ್ನು ಗುರುತಿಸಿ, ಅಗತ್ಯವಿರುವಷ್ಟು ಮಾತ್ರ ಗೊಬ್ಬರ ಬಳಸಲು ನೆರವಾಗುತ್ತದೆ, ಇದರಿಂದ ರೈತರಿಗೆ ವೆಚ್ಚ ಉಳಿತಾಯವಾಗುತ್ತದೆ. ಉತ್ತಮ ಭೂಮಿಯ ಹಾಗೂ ಮಣ್ಣಿನ ಆರೋಗ್ಯ ನಿರ್ವಹಣೆ ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಸಮೀಕ್ಷಾ ವರದಿಯಲ್ಲಿ ಮಣ್ಣು ಮತ್ತು ಭೂ ಸಂಪನ್ಮೂಲಗಳ ವಿವರ, ಗ್ರಾಮ ಮಟ್ಟದ ಮಣ್ಣು ನಕ್ಷೆಗಳು, ಭೂ ಸಾಮರ್ಥ್ಯ, ಭೂ ನೀರಾವರಿ ಯೋಗ್ಯತೆ ಹಾಗೂ ಬೆಳೆ ಯೋಗ್ಯತೆ ಕುರಿತ ವಿವರಣೆಗಳು ಒಳಗೊಂಡಿರುತ್ತವೆ. ಈ ಮಾಹಿತಿಯು ದೇಶದಲ್ಲಿ ಸುಸ್ಥಿರ ಕೃಷಿ ಮತ್ತು ಭೂ ನಿರ್ವಹಣೆಗೆ ಅತ್ಯಂತ ಮಹತ್ವದ್ದಾಗಿದೆ ಎಂದು ಹೇಳಿದರು.

ಇದೇ ರೀತಿ, ಸಂಸ್ಥೆಯ ಇನ್ನೂ ಎರಡು ತಂಡಗಳು ಡಾ. ಮಂಜುನಾಥ ಚಾರಿ ಕೆ., ಸಂಜಯ್ ಕಶ್ಯಪ್, ಅನುರಾಗ್ ಸಕ್ಸೇನಾ ಹಾಗೂ ಕುಮಾರ್ ನಾಯಕ್ ಅವರನ್ನು ಒಳಗೊಂಡ ತಂಡಗಳು ಧಾರವಾಡ ಹಾಗೂ ಕೊಪ್ಪಳ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಣ್ಣು ಸಮೀಕ್ಷಾ ಕಾರ್ಯವನ್ನು ನಡೆಸುತ್ತಿವೆ ಎಂದು ತಿಳಿಸಿದರು.

# ಬೀದರ್ ಐಡಲ್–4 ಗಾಯನ ಸ್ಪರ್ಧೆ ಫೆ.15ರಂದು



**ಬೀದರ್:ಡಿ.31**–ಬೀದರ್ ಜಿಲ್ಲೆಯ ಕಲಾವಿದರಿಗಾಗಿ ಹೊಸ ವರ್ಷದ ಸುವರ್ಣಾವಕಾಶವಾಗಿ, PPGMMME ಸಂಸ್ಥೆಯ ವತಿಯಿಂದ ಮುಂಬರುವ ಫೆಬ್ರವರಿ 15, 2026ರಂದು "ಬೀದರ್ ಐಡಲ್–4" ಕನ್ನಡ ಹಾಗೂ ಹಿಂದಿ ಸಿನಿಮಾ ಹಾಡುಗಳ ಗಾಯನ ಸ್ಪರ್ಧೆಯನ್ನು ಬೀದರ್ ನಗರದಲ್ಲಿ ಆಯೋಜಿಸಲಾಗಿದೆ.

ಇದು ಸಂಸ್ಥೆ ಆಯೋಜಿಸುತ್ತಿರುವ ನಾಲ್ಕನೇ ಸ್ಪರ್ಧೆಯಾಗಿದ್ದು, ಮೊದಲ "ಬೀದರ್ ಐಡಲ್–1" ಸ್ಪರ್ಧೆ 2013ರಲ್ಲಿ ಹುಮನಾಬಾದ್‌ನಲ್ಲಿ ನಡೆಯಿತು. ಅದರಲ್ಲಿ ಎಂ.ಡಿ. ಅಫಸರ್ ಖಾನ್ ಪ್ರಥಮ ಬಹುಮಾನ ಪಡೆದಿದ್ದರು. 2014ರಲ್ಲಿ ಭಾಲ್ಕಿಯಲ್ಲಿ ನಡೆದ ಎರಡನೇ ಸ್ಪರ್ಧೆಯಲ್ಲಿ ಜೂನಿಯರ್ ವಿಭಾಗದಲ್ಲಿ ಅಂಜಲಿ ಮಾಲೆ ಹಾಗೂ ಸೀನಿಯರ್ ವಿಭಾಗದಲ್ಲಿ ಭೀಮರಾವ ಬಳತೆ ವಿಜೇತರಾಗಿದ್ದರು. 2025ರಲ್ಲಿ ಬೀದರ್ ನಗರದಲ್ಲಿ ನಡೆದ ಮೂರನೇ ಸ್ಪರ್ಧೆಯಲ್ಲಿ ರಶ್ಮಿ ಶರ್ಮಾ ಪ್ರಥಮ ಸ್ಥಾನ ಪಡೆದಿದ್ದರು.

2026ರಲ್ಲಿ ನಡೆಯಲಿರುವ "ಬೀದರ್ ಐಡಲ್–4" ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ರೂ.21,000, ದ್ವಿತೀಯ ಬಹುಮಾನ ರೂ.15,000 ಹಾಗೂ ತೃತೀಯ ಬಹುಮಾನ ರೂ.6,000 ನಗದು ಬಹುಮಾನ ಘೋಷಿಸಲಾಗಿದೆ.

18 ವರ್ಷ ಮೇಲ್ಪಟ್ಟ ಆಸಕ್ತ ಗಾಯಕರು ಜನವರಿ 8 ಮತ್ತು 11, 2026ರಂದು ನಡೆಯುವ ಆಡಿಷನ್‌ಗಳಲ್ಲಿ ಭಾಗವಹಿಸಬಹುದಾಗಿದೆ. ಆಡಿಷನ್‌ಗೆ ರೂ.200 ನೋಂದಣಿ ಶುಲ್ಕ ನಿಗದಿಪಡಿಸಲಾಗಿದ್ದು, ಪ್ರವೇಶ ಅರ್ಜಿಗಳು ಕೃಷ್ಣಾ ದರ್ಶಿನಿ (ಉಡುಪಿ ಹೋಟೆಲ್, ಮೈಲೂರ ಕ್ರಾಸ್), ಶಾರದಾ ಬುಕ್ ಡಿಪೋ (ಬಿವಿಬಿ ಕಾಲೇಜು ಎದುರು) ಹಾಗೂ ಬೀದರ್ ಬುಕ್ ಡಿಪೋ (ಶಾಹಾಗಂಜ್)ಗಳಲ್ಲಿ ಲಭ್ಯವಿರುತ್ತವೆ.ಆಡಿಷನ್‌ಗಳ ಮೂಲಕ ಆಯ್ಕೆಯಾಗುವ 40 ಕಲಾವಿದರು ಮೊದಲ ಮತ್ತು ಎರಡನೇ ಸುತ್ತಿನಲ್ಲಿ ಸ್ಪರ್ಧಿಸಲಿದ್ದು, ಅಂತಿಮವಾಗಿ ಆಯ್ಕೆಯಾಗುವ 15 ಜನ ಕಲಾವಿದರು ಸೋಲಾಪೂರದ ಖ್ಯಾತ "ಸ್ಟಾರ್ಸ್ ಆಫ್ ಮೆಲೋಡಿ" ಆರ್ಕೆಸ್ಟ್ರಾ ತಂಡದೊಂದಿಗೆ ಲೈವ್ ಮ್ಯೂಸಿಕ್‌ನಲ್ಲಿ ಹಾಡುವ ಅವಕಾಶ ಪಡೆಯಲಿದ್ದಾರೆ ಎಂದು ಸಂಸ್ಥಾಪಕ ಅಧ್ಯಕ್ಷ ನಾಗೇಂದ್ರ ಎಸ್. ದಂಡೆ ತಿಳಿಸಿದ್ದಾರೆ.ಹೆಚ್ಚಿನ ಮಾಹಿತಿಗಾಗಿಎನ್. ಎಸ್. ದಂಡೆ 8147515354 ವಿ.ಎಸ್. ಉಪ್ಪಿನ್ 9008888616

# ಮಸೂದೆಗೆ ಅನುಮೋದನೆ ಬೇಡ



**ಲಕ್ಷ್ಮೇಶ್ವರ, ಡಿ31**– ಹಿಂದೂ ವಿರೋಧಿ ಕಾನೂನು, ದ್ವೇಷ ಭಾಷಣ ತಡೆ ಮಸೂದೆಗೆ ಹಿಂದೂ ಜನ ಜಾಗೃತಿ ವಿರೋಧಿಸುತ್ತದೆ ಮಸೂದೆ ಗೆ ಅನುಮೋದನೆ ನೀಡಬಾರದು ಎಂದು ಹಿಂದೂ ಜನ ಜಾಗೃತಿ ಸಮಿತಿ ರಾಜ್ಯ ಸಮನ್ವಯಕರಾದ ಗುರುಪ್ರಸಾದಗೌಡ ಹೇಳಿದರು

ಅವರು ಹಿಂದೂ ಜನ ಜಾಗೃತಿ ಸಮಿತಿ, ಹಿಂದೂ ಪರ ಸಂಘಟನೆ ಮೂಲಕ ಪಟ್ಟಣದ ತಹಸೀಲ್ದಾರ ಕಚೇರಿಯಲ್ಲಿ ತಹಸೀಲ್ದಾರ ಧನಂಜಯ ಎಂ ಅವರ. ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಮಾತನಾಡುತ್ತ, ವಿಧಾನಸಭೆಯಲ್ಲಿ ಅಂಗೀಕೃತಗೊಂಡಿರುವ "ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆ) ವಿಧೇಯಕ, 2025ಕ್ಕೆ ರಾಜ್ಯಪಾಲರು ಅನುಮೋದನೆ ನೀಡಬಾರದು ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ತಡೆ ವಿಧೇಯಕವು ಸ್ಪಷ್ಟತೆಯಿಲ್ಲದ ಹಾಗೂ ಸಂವಿಧಾನಕ್ಕೆ ವಿರುದ್ಧವಾದ ಕಾನೂನಾಗಿದ್ದು, ಜನರ ಮಾತಿನ ಸ್ವಾತಂತ್ರ್ಯ ಮತ್ತು ಧಾರ್ಮಿಕ ಆಚರಣೆಗಳಿಗೆ ದೊಡ್ಡ ಅಪಾಯವಾಗುತ್ತದೆವೇದ ಶಾಸ್ತ್ರ ಉಲ್ಲೇಖ, ಧರ್ಮಪ್ರಚಾರ, ಧಾರ್ಮಿಕ ಚರ್ಚೆಗಳು ಮತ್ತು ಮತೀಯವಾದದ ಟೀಕೆಗಳಂತಹ ಸಾಮಾನ್ಯ ಧಾರ್ಮಿಕ ಚಟುವಟಿಕೆಗಳೇ ಸಮಸ್ಯೆಗೆ ಒಳಗಾಗುವ ಭೀತಿ ಇದೆ. ಸಾಧು, ಸಂತರ, ಸಾಮಾಜಿಕ ಕಾರ್ಯಕರ್ತರು ಹಾಗೂ ಪತ್ರಕರ್ತರ ಕಿರುಕುಳಕ್ಕೆ ಕಾರಣವಾಗಬಹುದು.ಜನರ ವಾಕ್ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಪೂರ್ಣ ರಕ್ಷಣೆ ಒದಗಿಸುವುದು ಮತ್ತು ನ್ಯಾಯಾಲಯದ ಮೇಲ್ವಿಚಾರಣೆಯೊಂದಿಗೆ ಮರುಪರಿಶೀಲನೆ ನಡೆಸುವ ಉದ್ದೇಶದಿಂದ ಇದನ್ನು ವಿಧಾನಸಭೆಗೆ ಹಿಂದಿರುಗಿಸಬೇಕು ಎಂದು ಅಗ್ರಹಿಸಿದರು.

ಈ ಸಂದರ್ಭದಲ್ಲಿ ವಕೀಲರಾದ ಮಲ್ಲೇಶಪ್ಪ ಬಾಡಗಿ, ಎನ್. ಸಿ. ಬೆಲ್ಲದ, ರವಿಕಾಂತ ಅಂಗಡಿ, ಮಂಜುನಾಥ ಮಾಗಡಿ, ಶಂಕರ ಬ್ಯಾಡಗಿ, ಈರಣ್ಣ ಪೂಜಾರ, ಹೊನ್ನಪ್ಪ ವಡ್ಡರ, ಪ್ರವೀಣ ಯರ್ಲಗಟ್ಟಿ, ಅಮಿತ ಗುಡಗೇರಿ, ಬಸವರಾಜ ಮೆಣಸಿನಕಾಯಿ, ದಶರಥ ಕೋಟೆಗೌಡ್ರ, ಯಲ್ಲಪ್ಪ ಶಿರಬಡಗಿ, ಅಭಿಷೇಕ ಉಮಚಗಿ, ಅರುಣ ಕಳ್ಳಿಹಾಳ, ಪ್ರಕಾಶ ಗುತ್ತಲ, ಕೊಟ್ರೇಶ ಅಳವಂಡಿ, ಮಹಾದೇವಪ್ಪ ಕುಂದಗೋಳ, ಕಲ್ಯಾಣಿ ತಟ್ಟಿ, ಶೋಭಾ ಇಟಗಿ, ಬೇಬಿ ರುದ್ರಶೆಟ್ಟಿ ಅನೇಕರು ಇದ್ದರು.

## ಜಾನಪದ ತಜ್ಞ ಪ್ರಶಸ್ತಿ ಪುರಸ್ಕೃತ ಪ್ರೊ.ಪೋತೆಗೆ ಸನ್ಮಾನ

**ಕಲಬುರಗಿ,ಡಿ.31**–ಪ್ರೋ.ಬಿ.ಎಸ್. ಗದ್ದಗಿಮಠ ಜಾನಪದ ತಜ್ಞ ಪ್ರಶಸ್ತಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು ಹಾಗೂ ಕಲಾ ನಿಕಾಯದ ಡೀನರು ಆದ ಪ್ರೋ.ಎಚ್.ಟಿ.ಪೋತೆ ಅವರು ಭಾಜನರಾದ ಕಾರಣ ಕನ್ನಡ ಅಧ್ಯಯನ ಸಂಸ್ಥೆಯ ಅತಿಥಿ ಉಪನ್ಯಾಸಕರಾದ ಡಾ.ಎಂ.ಬಿ.ಕಟ್ಟಿ, ಡಾ.ಹಣಮಂತ ಮೇಲಕೇರಿ, ಡಾ.ಸಂತೋಷ ಕಂಬಾರ, ಡಾ.ಪ್ರಕಾಶ ಸಂಗಮ, ಡಾ. ಜಗನ್ನಾಥ, ಡಾ. ಚಾಂದಸಾಬ, ಡಾ. ಸಂತೋಷ ಹಿರೇಮನಿ, ಡಾ.ಸಿದ್ದಾರ್ಥ ಬಬಲಾದ, ಡಾ.ಶುಲಾಬಾಯಿ, ಡಾ.ಶೀಲಾದೇವಿ ಬಿರಾದಾರ, ಸಂತೋಷ ಮಾನುರೆ, ಲಕ್ಷ್ಮಿರಾಣಿ ರೋಣದ, ಸುಭಾಶ್ಚಂದ್ರ ಮೇಲಿನಮನಿ ಮತ್ತು ವಿದ್ಯಾರ್ಥಿಗಳು ಸೇರಿ ಸನ್ಮಾಸಿದರು.

ಯುವ ಮಾರ್ಗ www.yuvamarga.com Yuva Marga yuva_marga_

# ಗೋರ್ಕಲ್ ಶ್ರೀ ಲಕ್ಷ್ಮಿ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವೈಭವದ ಶ್ರೀ ವೈಕುಂಠ ಏಕಾದಶಿ ಆಚರಣೆ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.31–** ತಾಲೂಕಿನ ಗೋರ್ಕಲ್ ಗ್ರಾಮದಲ್ಲಿನ ಚಿಕ್ಕ ತಿರುಪತಿಯೆಂದು ಪ್ರಸಿದ್ಧವಾಗಿರುವ ಪುಣ್ಯಕ್ಷೇತ್ರವಾದ ಶ್ರೀ ಲಕ್ಷ್ಮಿ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಶ್ರೀ ವೈಕುಂಠ ಏಕಾದಶಿ ಅಂಗವಾಗಿ ವೈಭವದ ಶ್ರೀ ವೈಕುಂಠ ಏಕಾದಶಿ ಕಾರ್ಯಕ್ರಮಗಳು ನಡೆದವು.

ಬೆಳಿಗ್ಗೆ ದೇವಸ್ಥಾನದಲ್ಲಿನ ಗುಂಡಿನಲ್ಲಿ ಸ್ವಯಂಭುವಾಗಿ ಮೂಡಿರುವ ಕುಳಿತ ಬಂಗಿಯಲ್ಲಿರುವ ವಿಶೇಷವಾದ ಶ್ರೀ ವೆಂಕಟೇಶ್ವರ ಮೂರ್ತಿಗೆ ವಿಶೇಷ ಅಭಿಷೇಕ ಮತ್ತು ಅಲಂಕಾರ ನಡೆಸಲಾಯಿತು.

ಸಾವಿರಾರು ಭಕ್ತರು ಶ್ರೀ ವೈಕುಂಟ ದ್ವಾರದ ಮೂಲಕ ಶ್ರೀ ಸ್ವಯಂಭು ಶ್ರೀ ವೆಂಕಟೇಶ್ವರ ಸ್ವಾಮಿಯ ಮೂರ್ತಿಯ ದರ್ಶನವನ್ನು ಮಾಡಿಕೊಂಡು ಪೂಜೆ ಸಲ್ಲಿಸಿದರು.

# ಶ್ರೀ ಅಂಬಾದೇವಿ ಜಾತ್ರೆ: ಜನವರಿ 2ರಿಂದ 08ರವರಿಗೆ ಪ್ರಾಣಿ ಬಲಿ ನಿಷೇಧ

**ರಾಯಚೂರು,ಡಿ.31–** .ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸೋಮಲಾಪೂರು ಗ್ರಾಮದಲ್ಲಿ 2026ರ ಜನವರಿ 2ರಿಂದ ಜನವರಿ 08ರವರಿಗೆ ಜರುಗುವ ಶ್ರೀ ಅಂಬಾದೇವಿ ಜಾತ್ರೆ ಹಿನ್ನೆಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ದೇವಸ್ಥಾನದ ಆವರಣದಲ್ಲಿ ಅಥವಾ ಸೋಮಲಾಪೂರು ಗ್ರಾಮದ ಸಾರ್ವಜನಿಕ ವ್ಯಾಪ್ತಿಯಲ್ಲಿ ಭಕ್ತಾಧಿಗಳು, ಸಾರ್ವಜನಿಕರು ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ ಹಾಗೂ ಪಕ್ಷಿ ಬಲಿಯನ್ನು ನೀಡುವುದನ್ನು ನಿಷೇಧಿಸಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಿತೀಶ್ ಕೆ. ಅವರು ಕರ್ನಾಟಕ ಪ್ರಾಣಿ ಬಲಿ ನಿಷೇಧ ಕಾಯ್ದೆಯಡಿ ಆದೇಶ ಹೊರಡಿಸಿದ್ದಾರೆ.

# ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ 1.97 ಲಕ್ಷ ರೂ.ವಂಚನೆ

**ಕಲಬುರಗಿ,ಡಿ.31–**ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ 1.97 ಲಕ್ಷ ರೂಪಾಯಿ ಆನ್‌ಲೈನ್ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.ನಗರದ ಸೇಡಂ ರಸ್ತೆಯ ಸ್ವಸ್ತಿಕ ನಗರದ ನಿವಾಸಿಯಾದ ನಿವೃತ್ತ ಉಪ ಸಂರಕ್ಷಣಾಧಿಕಾರಿ ಮಲ್ಲಪ್ಪ ಭಾವಿಕಟ್ಟಿ (62) ಅವರೇ ವಂಚನೆಗೆ ಒಳಗಾಗಿದ್ದಾರೆ.

ಮಲ್ಲಪ್ಪ ಭಾವಿಕಟ್ಟಿ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬ ವಾಟ್ಸಪ್ ಮೂಲಕ ಕರೆ ಮಾಡಿ ಲಿಂಕ್ ಕಳುಹಿಸಿ ಅದರ ಮೇಲೆ ಕ್ಲಿಕ್ ಮಾಡಿಸಿಕೊಂಡು ಎರಡು ಬ್ಯಾಂಕ್ ಖಾತೆಗಳಿಂದ 1.97 ಲಕ್ಷ ರೂಪಾಯಿಗಳನ್ನು ಫೋನ್ ಪೇ ಮೂಲಕ ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ಮೋಸ, ವಂಚನೆ ಮಾಡಿದ್ದಾನೆ.ಮಲ್ಲಪ್ಪ ಭಾವಿಕಟ್ಟಿ ಅವರು ಈ ಸಂಬಂಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

# ಮಾನವಿ ಪತ್ತಿನ ಸಹಕಾರಿ ಸೌಹಾರ್ದ ಸಂಘದ ಹೊಸ ವರ್ಷದ ನೂತನ ಕ್ಯಾಲೆಂಡರ್ ಬಿಡುಗಡೆ





ಯುವಮಾರ್ಗ ಸುದ್ದಿ

**ಮಾನ್ವಿ,ಡಿ.31–**ಇಂದು ನಗರದ ನಮ್ಮ ಮಾನವಿ ಪತ್ತಿನ ಸಹಕಾರಿ ಸೌಹಾರ್ದ ಸಂಘದ ಕಾರ್ಯಾಲಯದಲ್ಲಿ ನಡೆದ ನಮ್ಮ ಮಾನವಿ ಪತ್ತಿನ ಸಹಕಾರಿ ಸೌಹಾರ್ದ ಸಂಘದ ಹೊಸ ವರ್ಷದ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಿ ಶುಭ ಕೋರಿದ ಜನಪ್ರಿಯ ನಾಯಕರು ಹಾಗೂ ನಿಕಟಪೂರ್ವ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ದೊರೆ ಅವರು ಇದೇ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಮಾನ್ವಿ ತಾಲೂಕು ಅಧ್ಯಕ್ಷರಾದ ಈರಣ್ಣ ಮರ್ಲಟ್ಟಿ, ಜೆಡಿಎಸ್ ಪಕ್ಷದ ಸಿರವಾರ ತಾಲೂಕು ಅಧ್ಯಕ್ಷರಾದ ಮಲ್ಲಿಕಾರ್ಜುನ ಪಾಟೀಲ ಬಲ್ಲಟಗಿ, ನಗರ ಘಟಕದ ಅಧ್ಯಕ್ಷರು ಮತ್ತು ಬ್ಯಾಂಕ್ ಅಧ್ಯಕ್ಷರದ ಊ ಮೌನೇಶ್ ಗೌಡ,ಬ್ಯಾಂಕ್ ಉಪಾಧ್ಯಕ್ಷರಾದ ಅಮರೇಶ್ ಬೆಟ್ಟದರು, ನಿರ್ದೇಶಕರಾದ ನಾಗರಾಜ ಬಿಚ್ಚಾಲಿ. ಮಾಜಿ ಪುರಸಭೆ ಸದಸ್ಯರಾದ ಬಾಷಾ ಸಾಬ್, ಹಂಪನಗೌಡ ಮಾನ್ವಿ, ವಿಜಯ್ ನಾಯಕ ಕೊಟ್ನೆಕಲ್ ಸೇರಿದಂತೆ ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ವರ್ಗದವರು ಇದ್ದರು..

# ಸಂಗೀತಾ ಜಿಲ್ಲಾಮಟ್ಟಕ್ಕೆ ಆಯ್ಕೆ ತಾಲೂಕ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ

## ಮುಷ್ಟೂರ್ ಶಾಲೆಯ ಮಕ್ಕಳ ಸಾಧನೆಗೆ ಮುಖ್ಯೋಪಾಧ್ಯಾಯ ಝುರೀನಾ ಹರ್ಷ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.31–** ಬಲ್ಲಟಗಿಯಲ್ಲಿ ನಡೆದ ತಾಲೂಕ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದಲ್ಲಿ ಸ.ಹಿ.ಪ್ರಾ.ಶಾಲೆಯ ಮುಸ್ಟೂರು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಸಾಧನೆಗಳ ಸುರಿಮಳೆ ಬರೆಸಿದ್ದಾರೆ. ಸಂಗೀತ ಕವನ ವಾಚನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆಮ ಜೊತೆಗೆ ಕಿರಿಯ ವಿಭಾಗದಲ್ಲಿ ಲೇಖನ ಅಭಿನಯ ಗೀತೆಯಲ್ಲಿ ಪ್ರಥಮ, ಧಾರ್ಮಿಕ ಪಠಣ(ಅರೇಬಿಕ್) ತೃತೀಯ, ಕೀರ್ತಿ ಇಂಗ್ಲಿಷ್ ಕಂಠಪಾಠ ದ್ವಿತೀಯ ಮತ್ತು ಕಥೆ ಹೇಳುವುದರಲ್ಲಿ ದ್ವಿತೀಯ, ಹಿರಿಯ ವಿಭಾಗದಲ್ಲಿ ಅಶ್ವಿನಿ ದೇಶಭಕ್ತಿ ಗೀತೆಯಲ್ಲಿ ದ್ವಿತೀಯ ಹಾಗೂ ಅಭಿನಯ ಗೀತೆಯಲ್ಲಿ ತೃತೀಯ, ಅಂಜಲಿ ಕಥೆ ಹೇಳುವುದರಲ್ಲಿ ತೃತೀಯ, ಪ್ರೌಢ ವಿಭಾಗದಲ್ಲಿ ಗೀತಾ ಕವನ ವಾಚನ ತೃತೀಯ, ಸ್ವಾತಿ ಭಾವಗೀತೆಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡು ಶಾಲೆಗೆ ಊರಿಗೆ ಕೀರ್ತಿ ತಂದಿದ್ದಾರೆ.

ಶಾಲೆಯ ಮುಖ್ಯೋಪಾಧ್ಯಾಯ, ಶಿಕ್ಷಕ ವೃಂಧ, ಎಸ್.ಡಿ.ಎಂ.ಸಿ ಪದಾಧಿಕಾರಿಗಳು ಗ್ರಾಮಸ್ಥರು ಸಂಘ ಸಂಸ್ಥೆಗಳು ಅಭಿನಂಧಿಸಿದ್ದಾರೆ.

# ಜಿಲ್ಲಾ ಆರೋಗ್ಯ ಸಂಘದ ಸಮಿತಿ ಸಭೆಯಲ್ಲಿ ಜಿ.ಪಂ ಸಿಇಒ ಸೂಚನೆ

## ಗರ್ಭಿಣಿ, ಬಾಣಂತಿಯರಿಗೆ ಸೇವೆಗಳನ್ನು ಒದಗಿಸಲು ಶ್ರಮಿಸಿ: ಈಶ್ವರ ಕುಮಾರ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.31–**ಜಿಲ್ಲೆಯಲ್ಲಿ ಗರ್ಭಿಣಿ, ಬಾಣಂತಿಯರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಸಂಬಂಧಿಸಿದ ಅಧಿಕಾರಿಗಳು ಶ್ರಮಿಸಬೇಕು. ಅಲ್ಲದೆ ಹೆರಿಗೆ ಸಮಯದಲ್ಲಿ ತಾಯಂದಿರಿಗೆ ರಕ್ತ ಒದಗಿಸಲು ದಾನಿಗಳ ಸಂಪರ್ಕ ಸಾಧಿಸಿ ತಾಯಿಯ ಮರಣವಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಡಿಸೆಂಬರ್ 30ರ ಮಂಗಳವಾರ ದಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಸಂಘದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗರ್ಭಿಣಿ ಅವಧಿ ಸೇರಿದಂತೆ ಹೆರಿಗೆ ಸಂದರ್ಭದಲ್ಲಿ ಸುರಕ್ಷಿತ ಹೆರಿಗೆ ಕೈಗೊಳ್ಳಲು ಅಪರೂಪದ ರಕ್ತದ ಗುಂಪು ಹೊಂದಿದ ತಾಯಂದಿರಿಗೆ ರಕ್ತ ಒದಗಿಸಲು ದಾನಿಗಳ ಸಂಪರ್ಕ ಸಾಧಿಸುವುದರೊಂದಿಗೆ ಎಲ್ಲ ಸರಕಾರಿ ಹಾಗೂ ಖಾಸಗಿ ರಕ್ತ ಬ್ಯಾಂಕ್‌ಗಳಲ್ಲಿ ತಪ್ಪದೆ ರಕ್ತವನ್ನು ಸಂಗ್ರಹಿಸಲು ಜಿಲ್ಲೆಯಾದ್ಯಂತ ಅಧಿಕಾರಿಗಳು ನಿಗಾವಹಿಸಿ, ತಾಯಿ ಮರಣವಾಗದಂತೆ ಶ್ರಮಿಸಬೇಕೆಂದು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ತಾಯಿಮರಣ ಗಣನಿಯವಾಗಿ ಕಡಿಮೆಯಾಗುತ್ತಿದ್ದು, ಕ್ಷೇತ್ರ ಮಟ್ಟದಲ್ಲಿ ವೈದ್ಯರಿಂದ ಹಿಡಿದು ಪಿಹೆಚ್‌ಸಿಓ, ಆಶಾ ಕಾರ್ಯಕರ್ತೆವರೆಗೆ ತಂಡವಾಗಿ ಕಾರ್ಯ ನಿರ್ವಹಿಸುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾನ್ಯ ಮುಖ್ಯಮಂತ್ರಿಗಳು ಅವರ ನಿರ್ದೇಶನದಂತೆ ತಾಯಿ ಮರಣ ನಿಯಂತ್ರಣ ಕ್ರಮಗಳನ್ನು ತೆಗೆದುಕೊಂಡು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಬೇಕೆಂದರು.

ಗರ್ಭಿಣಿಯೆಂದು ತಿಳಿದ ದಿನದಂದ ಕಬ್ಬಿಣಾಂಶ ಪ್ರಮಾಣ ಕಡಿಮೆಯಾಗದಂತೆ ಕಬ್ಬಿಣಾಂಶ ಮಾತ್ರೆ, ಐರನ್ ಸುಕ್ರೋಸ್ ಒದಗಿಸುವುದು, ಅಗತ್ಯವಿದ್ದಲ್ಲಿ ರಕ್ತಪೂರಣ ಮಾಡಿಸಲು ಕ್ರಮವಹಿಸಬೇಕು. ಇತರೆ ಆರೋಗ್ಯ ಸಮಸ್ಯೆಗಳನ್ನು ಗುರ್ತಿಸಿ ಸೂಕ್ತವ ಚಿಕಿತ್ಸೆ ನೀಡಲು ತಂಡವಾಗಿ ಕಾರ್ಯನಿರ್ವಹಿಸಬೇಕೆಂದರು.

ಸಾಮಾನ್ಯವಾಗಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಕಬ್ಬಿಣಾಂಶ ಕೊರತೆ, ಅಧಿಕ ರಕ್ತದೊತ್ತಡ, ಡಯಾಬಿಟಿಸ್, ತೂಕ ಪ್ರಮಾಣ ಸೇರಿದಂತೆ ಇತರೆ ಅಂಶಗಳು ಏರಿಳಿತಗೊಳ್ಳುತ್ತದೆ. ಇದಕ್ಕೆ ಸಕಾಲದಲ್ಲಿ ತಪಾಸಣೆ ಮಾಡಿಕೊಳ್ಳಲು ಸೂಚಿಸಬೇಕು. ಅಲ್ಲದೆ ಗರ್ಭಿಣಿಯರು ತಪಾಸಣೆಗೆ ಆಗಮಿಸುವ ಸಮಯದಲ್ಲಿ ಇವರಿಗೆ ದೇಹದಲ್ಲಿ ಯಾವ ಅಂಶಗಳ ಪ್ರಮಾಣ ಕಡಿಮೆ ಅಥವಾ ಹೆಚ್ಚು ಇದೆ. ಎಂಬುದನ್ನು ಖಾತ್ರಿ ಪಡಿಸಿಕೊಂಡು ವೈದ್ಯಾಧಿಕಾರಿಗಳು, ತಾಯಿ ಕಾರ್ಡ್ಗಳಲ್ಲಿ ನಮೂದಿಸಬೇಕು ಎಂದು ಸಂಬಂಧಿಸಿದ ಆರೋಗ್ಯ ಇಲಾಖೆಯ ಅಧಿಕಾರಿ ಗಳಿಗೆ ಸೂಚಿಸಿದರು. ಬಾಲ್ಯವಿವಾಹ ತಡೆಗೆ ಕ್ರಮ: ಬಾಲ್ಯ ವಿವಾಹ ಅದರಲ್ಲೂ ಹೆಣ್ಣುಮಕ್ಕಳ ಬಾಲ್ಯ ವಿವಾಹ ತಡೆಗೆ ಎಲ್ಲ ಮುಂಚೂಣಿ ಇಲಾಖೆಗಳು ಸಮನ್ವಯದೊಂದಿಗೆ ನಿರಂತರ ಜಾಗೃತಿ ನೀಡಬೇಕು. ಹಾಗೂ ಆರೋಗ್ಯ ಇಲಾಖೆಯು ತಜ್ಞ ವೈದ್ಯರ ಮೂಲಕ ತಪಾಸಣಾ ಶಿಬಿರವನ್ನು ಕಾಲ–ಕಾಲಕ್ಕೆ ಏರ್ಪಡಿಸಬೇಕು ಅಲ್ಲದೆ ಅಪೌಷ್ಟಿಕ ಮಕ್ಕಳ ತಡೆಗೆ ರಿಮ್ಸ್ ಹಾಗೂ ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ ಇರುವ ಪೌಷ್ಟಿಕ ಪುನಶ್ಚೇತನ ಕೇಂದ್ರ (ಎನ್‌ಆರ್‌ಸಿ)ಗಳಿಗೆ ಮಕ್ಕಳನ್ನು 14 ದಿನಗಳವರೆಗೆ ಕಳುಹಿಸಲು ಪಾಲಕರಿಗೆ ತಿಳಿಹೇಳಬೇಕು ಎಂದರು.

ಇದೇ ಸಂಧರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರ ಚಿಕಿತ್ಸ ಡಾ.ವಿಜಯ ಶಂಕರ, ಜಿಲ್ಲಾ ಆರ್.ಸಿ.ಹೆಚ್ ಡಾ.ನಂದೀತಾ ಎಮ್.ಎನ್., ಡಿಪಿಡಿಓ ಡಾ. ಚಂದ್ರಶೇಖರಯ್ಯ, ಡಿಎಸ್‌ಓ ಡಾ.ಗಣೇಶ್ ಕೆ., ಜಿಲ್ಲಾ ಎನ್‌ಫೋಸ್ಮೆಂಟ್ ಅಧಿಕಾರಿ ಡಾ.ಶಿವಕುಮಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

# ಉದ್ಯೋಗ ಮೇಳದ ಪೂರ್ವಭಾವಿ ಸಭೆ ಉದ್ಯೋಗ ಮೇಳ ಯಶಸ್ವಿಗೆ ಸಿದ್ಧತೆ ಮಾಡಿಕೊಳ್ಳಿ: ಶರಣಬಸವರಾಜ




ಯುವಮಾರ್ಗ ಸುದ್ದಿ

**ರಾಯಚೂರು,ಡಿ.31–** ಜಿಲ್ಲೆಯ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಉದ್ಯೋಗ ಮೇಳಕ್ಕೆ ಬೇಕಾಗುವ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಅಲ್ಲದೆ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರುದ್ಯೋಗಿಗಳು ಭಾಗಿಯಾಗಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾ ನಿರ್ದೇಶಕರಾದ ಶರಣಬಸವರಾಜ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಡಿಸೆಂಬರ್ 31ರ ಬುಧವಾರ ದಂದು ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ಉದ್ಯೋಗ ಮೇಳದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೇಳವು ಸಂಜೀವಿನಿ–ಕೆ.ಎಸ್.ಆರ್.ಎಲ್.ಪಿ.ಎಸ್, ಡಿಡಿಯು–ಜಿಕೆ ಯೋಜನೆಯಡಿ ಜಿಲ್ಲೆಗಳಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಬೇಕಾಗಿದೆ. ಉದ್ಯೋಗ ಮೇಳದ ಅವಧಿಯಲ್ಲಿ ಉದ್ಯೋಗದಾತ ಸುಮಾರು 75 ಸಂಸ್ಥೆಗಳನ್ನು ಆಹ್ವಾನಿಸಬೇಕಾಗಿದ್ದು, ಮೇಳದಲ್ಲಿ ಕನಿಷ್ಠ 1500 ಜನ ಅಭ್ಯರ್ಥಿಗಳಿಗೆ ಉದ್ಯೋಗವಕಾಶವನ್ನು ಕಡ್ಡಾಯವಾಗಿ ಕಲ್ಪಿಸುವ ಗುರಿಯನ್ನು ನಿಗಧಿಪಡಿಸಲಾಗಿದೆ. ಅಲ್ಲದೆ ಈ ಮೇಳದ ಎಲ್ಲಾ ಚಟುವಟಿಕೆಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವ ಮೂಲಕ ವ್ಯಾಪಕ ಪ್ರಚಾರ ಕಾರ್ಯಗಳನ್ನು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕೈಗೊಳ್ಳಬೇಕು ಎಂದರು.

ಮೇಳಯು ರಾಯಚೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಜನವರಿ ತಿಂಗಳಲ್ಲಿ ನಡೆಸಲಾಗುತ್ತಿದ್ದು, ಮೇಳದಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಮೊದಲುಗೊಂಡು ಪಿಯುಸಿ, ಸಾಮಾನ್ಯ ಪದವಿ, ಡಿಪ್ಲೊಮಾ, ಐಟಿಐ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್ಗಳನ್ನು ಕಲಿತವರಿಗೆ ಉದ್ಯೋಗಾವಕಾಶ ಕಲ್ಪಿಸಲು ವೇದಿಕೆ ಸಜ್ಜುಗೊಳಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 75 ಉದ್ಯೋಗದಾತರು (ಕಂಪೆನಿಗಳು) ಭಾಗವಹಿಸಲಿದ್ದು, ಆಸಕ್ತ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಬೇಕು. ಮೇಳದಲ್ಲಿ ಆಯ್ಕೆಯಾದವರಿಗೆ ಸ್ಥಳದಲ್ಲಿಯೇ ಆಫರ್ ಲೆಟರ್ ಕೊಡಲಿದ್ದಾರೆ ಎಂದರು.ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಧಿಕಾರಿ ವಿಜಯಶಂಕರ್, ಸಿಡಾಕ್ ಜಂಟಿ ನಿರ್ದೇಶಕರಾದ ಜಿ.ಯು.ಹುದೇಡ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಉಪ ನಿರ್ದೇಶಕರಾದ ರಾಜಕುಮಾರ್ ಪಾಟೀಲ್, ಜಿಲ್ಲಾ ಉದ್ಯೋಗಾಧಿಕಾರಿ ನವೀನ್ ಕುಮಾರ್, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಸಂಘದ ಕಾರ್ಯದರ್ಶಿ ಜಂಬಣ್ಣ ಸೇರಿದಂತೆ ವಿವಿಧ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು ಸಭೆಯಲ್ಲಿ ಇದ್ದರು.

# ಕೈದಿಗಳ ಜೂಜಾಟದ ವಿಡಿಯೋ ವೈರಲ್

**ಕಲಬುರಗಿ,ಡಿ.31–** ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಹೈಫೈ ಜೀವನದ ಮತ್ತೊಂದು ವಿಡಿಯೋ ವೈರಲ್ ಆಗಿದೆ.

ಬ್ರ್ಯಾಂಡೆಡ್ ಮದ್ಯ ಸೇವಿಸುತ್ತ, ಸಿಗರೇಟ್ ಸೇದುತ್ತಾ ಗುಂಪು ಗುಂಪಾಗಿ ಜೂಜಾಟ ಆಡುತ್ತಿರುವ, ಕ್ಲಬ್‌ಗಳನ್ನೆ ಮೀರಿಸೋ ಬಿಂದಾಸ್ ಲೈಫ್‌ನ ವಿಡಿಯೋ ಇದಾಗಿದೆ.ಬಿಗಿ ಭದ್ರತೆ ಇರುವ ಜೈಲಿನಲ್ಲಿ ನಿಷೇಧಿತ ವಸ್ತುಗಳು ಹೇಗೆ ಸರಬರಾಜು ಆಗುತ್ತಿವೆ ಎಂಬುದೇ ಯಕ್ಷ ಪ್ರಶ್ನೆಯಾಗಿದೆ.



ಇಷ್ಟೆಲ್ಲಾ ಅಕ್ರಮ ನಡೆಯುತ್ತಿದ್ದರೂ ಅಧಿಕಾರಿಗಳು ಏನು ಕ್ರಮ ಕೈಗೊಳ್ಳುತ್ತಿಲ್ಲವೇ ? ಎಂಬ ಪ್ರಶ್ನೆ ಎದುರಾಗಿದೆ.

ಜೈಲ್ ಅಧಿಕಾರಿಗಳ ವಿರುದ್ಧ ಲಂಚದ ಆರೋಪ ಮಾಡಿದ್ದ ಪಿಎಸ್ಐ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್.ಡಿ ಪಾಟೀಲ್ ವಿಡಿಯೋ ನಿನ್ನೆಯಷ್ಟೇ ವೈರಲ್ ಆಗಿತ್ತು.

ಇಂದು ಜೈಲಿನಲ್ಲಿ ಕೈದಿಗಳ ಜೂಜಾಟದ ವಿಡಿಯೋ ವೈರಲ್ ಆಗಿದೆ .

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H